ಡಾ. ಸಿಂಪಿ ಲಿಂಗಣ್ಣ

ವ್ಯಕ್ತಿ ಪರಿಚಯ



ಡಾ. ಎಂ. ಜಿ. ಬಿರಾದಾರ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧

ಡಾ. ಸಿಂಪಿ ಲಿಂಗಣ್ಣ

ವ್ಯಕ್ತಿ ಪರಿಚಯ

ಡಾ. ಎಂ.ಜಿ. ಬಿರಾದಾರ

'ಚಿತ್ಕಳಾ', ಸೇಡಂ ರಸ್ತೆ, ಗುಬ್ಬೀ ಕಾಲನಿ,
ಗುಲಬರ್ಗಾ – 585 105

ಕರ್ನಾಟಕ ಜಾನಪದ ಪರಿಷತ್ತು

ನಂ.1, ಜಲದರ್ಶಿನಿ ಲೇ ಔಟ್,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

DR. SIMPI LINGANNA -
A pen portrait - by DR. M.G. BIRADAR.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ ೨೦೦೮
ಪ್ರತಿಗಳು : ೨೦೦೦
ಪುಟಗಳು : ೩೨
ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು
ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಡಾ. ಎಂ.ಜಿ.ಬಿರಾದಾರ್** ಅವರು ಡಾ. ಸಿಂಪಿ ಲಿಂಗಣ್ಣ ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೧-೦೧-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಒಂದು ಮಾತು

ಕರ್ನಾಟಕ ಜಾನಪದ ಪರಿಷತ್ತು 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯಲ್ಲಿ ಕಿರುಹೊತ್ತಿಗೆಗಳನ್ನು ಪ್ರಕಟಿಸುವ ಸ್ತುತ್ಯ ಯೋಜನೆಯೊಂದನ್ನು ಹಾಕಿಕೊಂಡಿದೆ. ಅದರಲ್ಲಿ ಜಾನಪದ ದಿಗ್ಗಜ ಡಾ. ಸಿಂಪಿ ಲಿಂಗಣ್ಣನವರನ್ನು ಕುರಿತು ಬರೆಯಲು ನನ್ನನ್ನು ಪರಿಷತ್ತು ಕೇಳಿಕೊಂಡಿತು. ಮೊದಲನೆಯದಾಗಿ ಕರಿಯನ್ನು ಕನ್ನಡಿಯಲ್ಲಿ ನಿಲ್ಲಿಸಿದಂತೆ ಕಿರಿದಾಗಿ ಬರೆಯುವುದು ಕಷ್ಟ. ಎರಡನೆಯದಾಗಿ ಈ ಜನಪ್ರಿಯತೆ ನನ್ನನ್ನು ಕಾಡಿತು. ನಾನು ಜನಪ್ರಿಯನಾಗಿ ಬದುಕುತ್ತೇನೆಂಬಷ್ಟೇ ಕಷ್ಟ, ಜನಪ್ರಿಯ ಪುಸ್ತಕ ಬರೆಯುವ ಕೆಲಸ! ಒಂದು ಪುಸ್ತಕ ಹಲವರಿಂದ ಓದಿಸಿಕೊಂಡ ಮೇಲೆ ಅದರ ಜನಪ್ರಿಯತೆ ನಿರ್ಣಯವಾಗಬೇಕಲ್ಲದೇ, ಜನಪ್ರಿಯ ಪುಸ್ತಕ ಬರೆಯುತ್ತೇನೆಂದು ಹೇಳಿಕೊಳ್ಳುವುದು ಗೌರವದ ಮಾತಾಗಲಾರದೇನೋ!

ಡಾ. ಲಿಂಗಣ್ಣನವರು ಪ್ರಮುಖವಾಗಿ ಜಾನಪದ ಕೃಷಿಕರು. ಆದರೆ ಅಷ್ಟೇ ವ್ಯಾಪಕವಾಗಿ ಜನಪದ ಸಾಹಿತ್ಯವಲ್ಲದ್ದನ್ನೂ ಬರೆದಿದ್ದಾರೆ. ನಿಜವಾದ ಸಾಹಿತಿ ಏನನ್ನೂ ಎಲ್ಲವನ್ನೂ ಸಾಹಿತ್ಯಿಕವಾಗಿ ಬರೆಯಬಲ್ಲ. ಡಾ. ಸಿಂಪಿಯವರು ಅರವಿಂದರ ದಾರ್ಶನಿಕ ಸಾಹಿತ್ಯವನ್ನು ನಿಘುಲವಾಗಿಯೇ ಬರೆದಿದ್ದಾರೆ. ಇದಕ್ಕಾಗಿ ಅದೆಲ್ಲವನ್ನೂ ಚಿತ್ರಿಸಿದಾಗಲೇ ಅವರ ವ್ಯಕ್ತಿತ್ವಕ್ಕೆ ಈ ಕೃತಿ ಕಿರು ಕಿಂಡಿಯಾಗಬೇಕು. ಕೇವಲ ಅವರ ಜನಪದ ಸಾಹಿತ್ಯಕ್ಕಷ್ಟೇ ಈ ಕೃತಿ ಸೀಮಿತವಾಗದಂತೆ ನೋಡಿಕೊಂಡಿದ್ದೇನೆ. ನನ್ನ ಉದ್ದೇಶ ಡಾಕ್ಟರ್ ಸಿಂಪಿ ಲಿಂಗಣ್ಣನವರ ಸಾಧನೆ ಮತ್ತು ವ್ಯಕ್ತಿತ್ವದ ಪೂರ್ಣ ಚಿತ್ರಣ ಓದುಗರಿಗಾಗಬೇಕೆಂಬುದು. ಡಾ. ಲಿಂಗಣ್ಣನವರು ಏನೇ ಬರೆದರೂ ಅವರ ದೃಷ್ಟಿಕೋನ ವಸ್ತು ವಿಚಾರ, ಅಭಿವ್ಯಕ್ತಿ ಶಕ್ತಿ ಎಲ್ಲವೂ ಜಾನಪದೀಯವಾಗೇ ಇರುವುದು. ಯಾಕೆಂದರೆ ಅವರ ಸಾಹಿತ್ಯದ ಮೂಲದ್ರವ್ಯವೇ ಜಾನಪದ. ಈ ಹಿನ್ನೆಲೆಯಲ್ಲಿ ಜಾನಪದ ವಿದ್ವಾಂಸ ಡಾ. ಸಿಂಪಿ ಲಿಂಗಣ್ಣನವರ ವ್ಯಕ್ತಿತ್ವವನ್ನು ಅವರ ಇನ್ನುಳಿದ ಸಾಹಿತ್ಯ ಪ್ರಕಾರಾವಲೋಕನದೊಂದಿಗೆ ಈ ಕಿರು ಕಾಗದದ ಮೇಲೆ ಚಿತ್ರಿಸಲೆತ್ನಿಸಿದ್ದೇನೆ. ಇದರಿಂದ ಪರಿಷತ್ತಿನ ಉದ್ದೇಶ ಸಾರ್ಥಕವಾದೀತೆಂದು ಭಾವಿಸುವೆ.

ಡಾ. ಸಿಂಪಿ ಲಿಂಗಣ್ಣನವರಿಗೆ ತೀರ ಹತ್ತಿರದವನಾಗಿದ್ದ ನಾನು ಅವರನ್ನು ಕುರಿತು ಈಗಾಗಲೇ ಸಾಕಷ್ಟು ಬರೆದಿದ್ದೇನೆ. ಅಂಥದರಲ್ಲಿ ಇದೂ ಒಂದು. ಈ ಕೆಲಸಕ್ಕೆ ನನ್ನನ್ನು ನಿಯೋಜಿಸಿದ ಪರಿಷತ್ತಿನ ಪದಾಧಿಕಾರಿಗಳಿಗೆ ಕೃತಜ್ಞತೆಗಳು.

ಗುಲಬರ್ಗಾ **ಮ.ಗು. ಬಿರಾದಾರ**

ಡಾ. ಸಿಂಪಿ ಲಿಂಗಣ್ಣ

ಜಾನಪದದ ಇನ್ನೊಂದು ಹೆಸರು ಡಾ. ಸಿಂಪಿ ಲಿಂಗಣ್ಣ. ಅವರು ಉಂಡದ್ದು ಉಟ್ಟದ್ದು ನೋಡಿದ್ದು ಮಾಡಿದ್ದು, ಆಡಿದ್ದು ಹಾಡಿದ್ದು ಎಲ್ಲವೂ ಜಾನಪದ. ಬೆವರಿಳಿವ ದುಡಿಮೆ, ಹೊಟ್ಟೆ ತುಂಬದ ಬಡತನ ಲಿಂಗಣ್ಣನವರಿಗೆ ಜಾನಪದ ಕಲಿಸಿದ ಪಾಠಶಾಲೆಗಳು. ಬದುಕಿನಲ್ಲಿ ಅವರು ಪಟ್ಟ ಕಷ್ಟ ಅನುಭವಿಸಿದ ಅಳಲು ಅಷ್ಟಿಷ್ಟಲ್ಲ. ಇದರಿಂದಾಗಿ ಅವರೊಬ್ಬ ಜಾನಪದ ತಜ್ಞ, ವಿದ್ವಾಂಸರಾಗಲು ಸಾಧ್ಯವಾಯಿತು ಎಂಬುದಂತೂ ಸತ್ಯ.

ಸಂಕಷ್ಟದ ಬಾಲ್ಯ

ಅವರು ಹುಟ್ಟಿ ಬೆಳೆದದ್ದು ವಿಜಾಪುರ ಜಿಲ್ಲೆಯ ಚಡಚಣದಲ್ಲಿ, 1905 ಫೆಬ್ರವರಿ ಹನ್ನೊಂದನೆಯ ದಿನ. ತಂದೆ ಶಿವಯೋಗಪ್ಪ, ತಾಯಿ ಸಾವಿತ್ರಿ. ಈರಪ್ಪ ಒಡಹುಟ್ಟಿದ ಅಣ್ಣ. ಮುಂದೆ ಲಿಂಗಣ್ಣನಾದ ನಾಗಪ್ಪನೇ ಈ ದಂಪತಿಗಳ ಎರಡನೆಯ ಚಿರಂಜೀವ. ಅನಂತರ ಹುಟ್ಟಿದ ಹೆಣ್ಣು ಮಗು ಬಹಳ ಕಾಲ ಬದುಕಲಿಲ್ಲ. ದುರಂತವೆಂದರೆ ಇವರ ತಾಯಿ ಸಾವಿತ್ರಿಯ ಸಾವು! ಆಗ ನಾಗಪ್ಪನಿಗೆ ಕೇವಲ ಒಂದೂವರೆ ವರ್ಷ! ಮಗು ನಾಗಪ್ಪ ಅಜ್ಜಿ ದಾನಮ್ಮನ ಉಡಿಗೆ ಬಿದ್ದ. ಅಜ್ಜಿ ಪ್ರೀತಿಯಿಂದ ಮೊಮ್ಮಗನನ್ನು ನಾಗಲಿಂಗ ಎಂದೇ ಕರೆಯುತ್ತಿದ್ದಳು. ಬರಬರುತ್ತ ನಾಗ ಮಾಯವಾಗಿ 'ಲಿಂಗ' ಮಾತ್ರ ಉಳಿಯಿತು. ಈ ಲಿಂಗನೇ ಮುಂದೆ ಲಿಂಗಣ್ಣನಾಗಿ, ಗುಣಮಾನ್ಯ ಡಾ. ಸಿಂಪಿ ಲಿಂಗಣ್ಣನಾದ.

'ಸಿಂಪಿ' ಈ ಮನೆತನದ ವೃತ್ತಿಮೂಲ ಅಡ್ಡಹೆಸರು. ಬಟ್ಟೆ ಹೊಲಿಯುವುದು, ನೂಲಿಗೆ ಬಣ್ಣ ಹಾಕುವುದು, ನೇಕಾರಿಕೆ ಇವರ ಕಸಬು. ಇದರಿಂದಾಗಿ 'ಲಿಂಗಣ್ಣ' ಸಾಹಿತ್ಯ ಸಾಗರದ 'ಸಿಂಪಿ ಲಿಂಗಣ್ಣ' ನೆನಿಸಿ ಖ್ಯಾತನಾಮನಾದ.

ತಂದೆ ಶಿವಯೋಗಪ್ಪ ಮನೆತನದ ವೃತ್ತಿಯ ಜೊತೆಗೆ ಕಲಾಪ್ರವೃತ್ತಿಯನ್ನೂ ರೂಢಿಸಿಕೊಂಡಿದ್ದ. ಬಯಲಾಟದ ಕಲಾಕಾರನಾಗಿ ಹೆಸರು ಮಾಡಿದ್ದ. ಮಗ ಈರಣ್ಣನನ್ನು ಕರಡೀಮಜಲು ವಾದ್ಯ ಪರಿಣತನಾಗುವಂತೆ ನೋಡಿಕೊಂಡಿದ್ದ. ಹೀಗೆ ಲಿಂಗಣ್ಣನಿಗೆ ಜನಪದ ಕಲೆಗಳ ಹಿನ್ನೆಲೆಯೂ ಪ್ರಾಪ್ತವಾಗಿತ್ತು. ಲಿಂಗಣ್ಣ ತಂದೆಯ ಹೆಗಲೇರಿ ಸಂತೆ–ಜಾತ್ರೆ ಸುತ್ತಾಡುತ್ತಿದ್ದ ಮಗುವಾಗಿದ್ದ. ತಂದೆ ಆಡಿದ ಬೈಲಾಟದ ಪಾತ್ರ, ಅಣ್ಣನ ಕರಡೀ ಮಜಲದ ಗತ್ತು, ನಾದ ಬಾಲಕ ಲಿಂಗಣ್ಣನ ಮುಗ್ಧ ಮನದಲ್ಲಿ ಮೂಡಿ ಮೊಳಕೆಯೊಡೆದವು. ಅದರಂತೆ ಮನೆತನದ ವೃತ್ತಿ, ಪರಿಸರ, ಹಳ್ಳಿಯ ಜನಜೀವನದ ಬದುಕಿನ ವಿಧಾನ ಲಿಂಗಣ್ಣನ ಮನದಾಳಕ್ಕಿಳಿದು, ಜಾನಪದ ಸಾರ ಹೀರಲು ಬೇರುಬಿಟ್ಟವು. ಹೀಗೆ ಬೆಳೆದ ಜಾನಪದ ಆಸಕ್ತಿ ಲಿಂಗಣ್ಣನವರಿಗೆ ತೀರ ಸಹಜ.

ಮಗು ಲಿಂಗಣ್ಣನಿಗೆ ಇನ್ನೂ ಲೌಕೀಕದ ಅರಿವು ಮೂಡಿರಲಿಲ್ಲ. ಮಕ್ಕಳೊಡನಾಡುತ್ತ ಅಕ್ಷರಾಭ್ಯಾಸ ಮಾಡುವ ಕಾಲ. ಹನ್ನೊಂದರ ಬಾಲ್ಯಾವಸ್ಥೆಯಲ್ಲಿದ್ದಾಗಲೇ ತಂದೆ ಶಿವಯೋಗಪ್ಪನವರೂ ಶಿವಾಧೀನರಾದರು. ಲಿಂಗಣ್ಣ ಈಗ ಪೂರ್ಣ ಪರದೇಶಿ! ಅಣ್ಣ ಅತ್ತಿಗೆಯರ ಆಸರೆ ಅನಿವಾರ್ಯವಾಯ್ತು. ಅತ್ತಿಗೆ ಗುರುಬಾಯಿಯ ಕೆಂಗಣ್ಣು ಇಕ್ಕುಳ ಕೈಗಳ ಹಿಡಿತದಲ್ಲಿ ಬಾಲ್ಯದ ಸ್ವಾತಂತ್ರ್ಯವೂ ಕಳೆದುಹೋಯಿತು. ಅವಳು ಹಾಕಿದ್ದನ್ನು ತಿಂದು, ಹೇಳಿದ್ದನ್ನು ಮಾಡುವುದೇ ಬಿಡದ ಕರ್ಮವಾಯ್ತು. ಹೀಗಾಗಿ ಲಿಂಗಣ್ಣನ ಬಾಲ್ಯದ ದಿನಗಳು ತೀರ ಕಷ್ಟದವಾಗಿದ್ದವು.

ಲಿಂಗಣ್ಣ ಶಾಲೆಗೆ ಹೋಗುವುದು, ಮನೆಕೆಲಸ ಇಲ್ಲದಾಗ, ಇಲ್ಲವೆ ಅವು ಮುಗಿದ ಮೇಲೆ. ಅವನು ಶಾಲೆಗೆ ಹೋಗುವ ಮೊದಲೇ ವಿಶೇಷ ಲೌಕಿಕಾನುಭವಿ, ಪ್ರಕೃತಿಪ್ರಿಯನಾಗಿದ್ದ. ಶಾಲೆಯಲ್ಲಿ ಕಲಿಯುವುದಕ್ಕಿಂತ, ಅಣ್ಣ ಅತ್ತಿಗೆಯರು ಹೇಳಿದ ಕೆಲಸದಲ್ಲೇ ವ್ಯವಹಾರ ಸಂಪನ್ನನಾದ. ಆದರೆ ಹುಡುಗ ಎಲ್ಲದರಲ್ಲೂ ಚುರುಕು, ಚಾಣಾಕ್ಷನೆಂದು ಜನ ಹೊಗಳುತ್ತಲೇ ಇದ್ದರು. ಅಡುಗೆ ಮನೆಯಿಂದ ಅಂಗಳದರೆಗಿನ ಯಾವ ಕೆಲಸವನ್ನೂ

ತಟ್ಟನೆ ಮಾಡಿ ಮುಗಿಸುತ್ತಿದ್ದ. ಅಣ್ಣ ಶಾಲೆಗೆ ಹೋಗೆಂದರೆ ಅತ್ತಿಗೆ ಬೇಡವೆನ್ನುವಾಕೆ.

ಹರೆಯದ ಹೊಸ್ತಿಲಲ್ಲಿ

1913ರಲ್ಲಿ ಹಿರಿಯರಾದ ಚನ್ನಮಲ್ಲಪ್ಪ ಗಲಗಲಿ (ಮಧುರಚನ್ನ), ಅವರು ಶಾಲೆಯ ವಿಚಾರ ಲಿಂಗಣ್ಣನ ತಲೆಯಲ್ಲಿ ಹಾಕಿದರು. ಇದರಿಂದಾಗಿ ಲಿಂಗಣ್ಣ ಶಾಲೆಯ ಕಡೆಗೆ ವಿಶೇಷ ಗಮನ ಹರಿಸಿದ. ನಸುಕಿನಲ್ಲೇ ಎದ್ದು ಮನೆಗೆಲಸ ಮುಗಿಸಿ ಶಾಲೆಗೆ ಹೋಗುವ ಇಚ್ಛಾಶಕ್ತಿಯನ್ನು ಬೆಳೆಸಿಕೊಂಡ. ಹೀಗಾಗಿ ಪ್ರಾಥಮಿಕ ಹಂತದ ಮುಲ್ಕೀ ಪರೀಕ್ಷೆಯಲ್ಲಿ ಜಿಲ್ಲೆಗೇ ಪ್ರಥಮನಾಗಿ ಪಾಸಾಗಿ ಎಲ್ಲರಿಗೂ ಅಚ್ಚರಿ ಮೂಡಿಸಿದ. ಹೈಸ್ಕೂಲ್ ಶಿಕ್ಷಣಕ್ಕೆ ವಿಜಾಪುರಕ್ಕೆ ಹೋಗುವುದು ಆರ್ಥಿಕ ದೃಷ್ಟಿಯಿಂದ ಅಸಾಧ್ಯಯವೇ ಆಗಿತ್ತು.

ಸದೃಢಕಾಯದ ಲಿಂಗಣ್ಣ ಅಣ್ಣನೊಡನೆ ನೇಯ್ಗೆಯ ಕೆಲಸದಲ್ಲಿ ನೆರವಾದ. ಸಂತೆಯಲ್ಲಿ ಕಾಳುಕಡಿ ಮಾರಾಟ ಮಾಡುತ್ತಿದ್ದ ಅತ್ತಿಗೆಗೆ ಎಲ್ಲ ರೀತಿಯಲ್ಲಿ ನೆರವಾದ. ಆಗಾಗ ಆಡುಗಳನ್ನು ಮೇಯಿಸಲು ಅಡವಿಗೆ ಹೋಗುವುದು, ಹಸಿದ ಹೊಟ್ಟೆ, ಬರಿಗಾಲು, ಅಳಲು ಕೇಳುವವರೇ ಇಲ್ಲ. ಬರಬರುತ್ತಾ ಸೀರೆ ನೇಯುವುದನ್ನೂ ಕಲಿತ. ಆದರೆ ಲಿಂಗಣ್ಣನಿಗೆ ಓದಿನ ಹುಚ್ಚು. ಮಾಸ್ತರನಾಗಬೇಕೆಂಬ ಉತ್ಕಟ ಹಂಬಲ. ಹಗಲು ನೇಯ್ಗೆಯ ಕೆಲಸ ಮಾಡಿ ರಾತ್ರಿ ಓದುವ ಹವ್ಯಾಸ ಹೆಚ್ಚಿಸಿಕೊಂಡ. ಕನ್ನಡದ ಹಲವಾರು ಕೃತಿಗಳ ಅಧ್ಯಯನ ಮಾಡಿದರು. ಅದರ ಫಲದಿಂದಾಗಿ ಹಲವು ಗೆಳೆಯರ ಸಹಾಯದಿಂದ ಚಡಚಣದಲ್ಲಿ 'ವಾಗ್ವಿಲಾಸ' ವಾಚನಾಲಯ ಆರಂಭಿಸಿದರು. ಊರಿನ ತರುಣರಿಗೆ ಓದಿನ ಚಟ ಅಂಟಿಸಿದರು. ಸಂಜೆ ಹತ್ತಾರು ಜನ ಕೂಡಿ, ವರ್ತಮಾನ ಪತ್ರ ಓದುವುದು, ಪುಸ್ತಕ ಓದಿ ಚರಿತ್ರೆ, ಕಥೆ ಹೇಳುವುದು. ಹೀಗೆ ಒಂದು ರೀತಿಯ ಅಕ್ಷರಾಂದೋಲನ ಆರಂಭಿಸಿದ್ದಲ್ಲದೆ, ಬಯಲಾಟ ಆಡಿಸುವುದು, ಜನಪದ ಹಾಡು ಹೇಳುವುದು ಮೊದಲಾಗಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದರು. ಸ್ವತಃ ನಾಟಕ ಬರೆದು ಪಾತ್ರವಹಿಸಿ ನಾಟಕ ಮಾಡಿಸಿದರು.

ಜನರಂಜನೆ, ಜನಜಾಗೃತಿ ಅವರ ಉದ್ದೇಶವಾಗಿತ್ತು. ಸರ್ಕಸ್ ನೋಡಿಬಂದ ಲಿಂಗಣ್ಣ ಅಂಗ ಚಮತ್ಕಾರಗಳನ್ನು ಪ್ರದರ್ಶಿಸಿ ಜನರನ್ನು ಬೆರಗುಗೊಳಿಸಿದರು. ಆದರೆ ಅವರೇ ಬರೆದ 'ಮರೆಮುಚ್ಚಕ' ನಾಟಕ ಮಾಡಿಸಿದಾಗ ಊರ ಜನ ಲಿಂಗಣ್ಣನ ಮೇಲೆ ತಿರುಗಿಬಿದ್ದರು. ಆ ನಾಟಕದಲ್ಲಿ ದಲಿತರೊಡನೆ ಸಹಭೋಜನದ ಸನ್ನಿವೇಶವಿತ್ತು. ಅದನ್ನು ಅರಗಿಸಿಕೊಳ್ಳಲಾಗದ ಕೆಲ ಪ್ರಮುಖರು ಲಿಂಗಣ್ಣನಿಗೆ ಬಹಿಷ್ಕಾರ ಹಾಕಿದರು! ಸಂಪ್ರದಾಯ ವಿರೋಧಿ ಎಂದು ಪ್ರತಿಭಟಿಸಿದರು. ಆಗಲೇ ಲಿಂಗಣ್ಣ ಖಾದೀ ಧರಿಸಿ ಗಾಂಧೀವಾದಿಯಾದರು. ಜನಪದ ಸಾಹಿತ್ಯ ಸಂಗ್ರಹದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಜಯಕರ್ನಾಟಕ ಪತ್ರಿಕೆಯಲ್ಲಿ ಅವುಗಳನ್ನು ಪ್ರಕಟಿಸಿದರು. ಲಿಂಗಣ್ಣನವರು ಶಿಕ್ಷಕನಾಗಿ ಎಲ್ಲಿಗಾದರೂ ಹೋಗಬೇಕೆಂದು ಹಲವಾರು ಅರ್ಜಿ ಹಾಕಿದರು. ಅವರ ಆಸೆ ಕೈಗೂಡಲಿಲ್ಲ. ಆದರೆ ಲಿಂಗಣ್ಣನಂಥ ಆದರ್ಶವಾದಿಗೆ, ಆ ಪರಿಸರದಲ್ಲಿ ಅವಕಾಶಗಳೇ ಇಲ್ಲದೆ ಮುಂದೆ ದಾರಿಕಾಣದ ಸ್ಥಿತಿ ಪ್ರಾಪ್ತವಾಯ್ತು

ಸಾಹಿತಿಗಳ ಸಂಪರ್ಕದಲ್ಲಿ

1923ರಲ್ಲಿ ಲಿಂಗಣ್ಣ ಧಾರವಾಡದ ಶಿಕ್ಷಕರ ಟ್ರೇನಿಂಗ್ ಕಾಲೇಜಲ್ಲಿ ತರಬೇತಿಗಾಗಿ ಆಯ್ಕೆಯಾದರು. ಎಲ್ಲಿಂದಲೋ ಬಂದ ಬೆಳಕಿನಂತೆ, ಇವರ ಬದುಕಿಗೆ ದಾರಿ ತೋರಿಸಿದ ಪ್ರಸಂಗವಿದು. ಧಾರವಾಡಕ್ಕೆ ಹೋಗಲೂ ದುಡ್ಡಿಲ್ಲದ ಲಿಂಗಣ್ಣ ಹಲವಾರು ಸಂಕಷ್ಟಗಳನ್ನೆದುರಿಸಿ ತರಬೇತಿಗೆ ಸೇರಿದರು. ಈ ತರಬೇತಿಯ ಜೊತೆ ಅವರು ಪಡೆದ ಹಲವು ಸಾಹಿತಿಗಳ ಸಂಪರ್ಕ ಅವರಿಗಾದ ದೊಡ್ಡ ಲಾಭ. ದ.ರಾ.ಬೇಂದ್ರೆ, ವಿನೀತರಾಮಚಂದ್ರರಾಯ, ಮ.ಪ್ರ.ಪೂಜಾರ, ಶಂಬಾ ಜೋಷಿ, ಬೆಟಗೇರಿ ಕೃಷ್ಣಶರ್ಮ ಮೊದಲಾದ ಸಾಹಿತಿಗಳ ಪರಿಚಯ ಒಡನಾಟದಲ್ಲಿ ಬಹಳಷ್ಟು ಜೀವನೋತ್ಸಾಹ ಪಡೆದರು. ಇವರೆಲ್ಲರ ಸಾಹಿತ್ಯಿಕ ಪ್ರಭಾವ ಸಾಕಷ್ಟಾದುದನ್ನು ಅವರು ಸದಾ ಸ್ಮರಿಸುತ್ತಿದ್ದರು. ಆಲೂರ ವೆಂಕಟರಾಯರು ಈ ಊರ್ಧ್ವಮುಖ ಚೇತನಕ್ಕೆ ಸಾಕಷ್ಟು ಮಾರ್ಗದರ್ಶನ ನೀಡಿದರು.

ಜಯಕರ್ನಾಟಕದಲ್ಲಿ ಅವರ ಲೇಖನಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದರು. ಸಿಂಪಿಯುವರಿಗೆ ತಾನು ಶಿಕ್ಷಕನಾಗುತ್ತೇನೆ ಎಂಬ ಉತ್ಸಾಹಕ್ಕಿಂತ ಸಾಹಿತಿಯಾಗುತ್ತೇನೆಂಬ ಹುಮ್ಮಸ್ಸು ಹಿರಿದಾಗಿತ್ತು. ಈ ಸಾಹಿತಿಗಳ ಸಂಪರ್ಕವನ್ನು ಲಿಂಗಣ್ಣ ಜೀವನದುದ್ದಕ್ಕೂ ಗೌರವದಿಂದ ಕಾಯ್ದುಕೊಂಡು ಬಂದರು.

ಕನಸುಗಾರ ಶಿಕ್ಷಕ

ಸಿಂಪಿ ಲಿಂಗಣನವರು 1925ರಲ್ಲಿ ಇಂಡೀ ತಾಲ್ಲೂಕಿನ ಭತಗುಣಕಿ ಹಳ್ಳಿಯ ಶಾಲಾಶಿಕ್ಷಕರಾಗಿ ನೇಮಕಗೊಂಡರು. ಅವರಿಗೆ ವೃತ್ತಿಯಲ್ಲಿ ಅಪಾರ ಉತ್ಸಾಹ. ಮಕ್ಕಳ ಭವಿಷ್ಯ ರೂಪಿಸುವ ಅತ್ಯಾಕಾಂಕ್ಷೆ. ಇವಕ್ಕೂ ಮಿಕ್ಕ ತುಡಿತ ಕನ್ನಡಾಭಿಮಾನ, ದೇಶಪ್ರೇಮ. ಇದಕ್ಕಾಗಿ ಶಾಲೆ ಮತ್ತು ಸಮಾಜ ಎರಡನ್ನೂ ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡರು. ಶಿಕ್ಷಣ ಮಕ್ಕಳ ಮನೋವಿಕಾಸಕ್ಕಾದರೆ, ಜನಮನೋವಿಕಾಸಕ್ಕೆ, ಸಾಮಾಜಿಕ ಪರಿವರ್ತನೆಗೆ ಸಾಹಿತ್ಯ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡರು. ಮರಾಠಿ ಪ್ರಭಾವದ ಆ ಊರಲ್ಲಿ ಕನ್ನಡ ಚಟುವಟಿಕೆ ಆರಂಭಿಸುವುದು ಅವರ ಆದ್ಯ ಕರ್ತವ್ಯವಾಯಿತು. 'ಮುದ್ದು ಮಕರಂದ' ಮೊದಲಾಗಿ ಕನ್ನಡ ಕೈಬರಹದ ಪತ್ರಿಕೆ ಸಿದ್ಧಪಡಿಸಿ ಅದರಲ್ಲಿ ಮಕ್ಕಳಿಗೆ ಮಾಸ್ತರರಿಗೆ ಬರೆಯಲು ಅವಕಾಶ ಮಾಡಿಕೊಟ್ಟರು. ಊರಲ್ಲಿ ಹಾಡುವವರ ಜನಪದ ಹಾಡುಗಳನ್ನೂ ಅದರಲ್ಲಿ ಸೇರಿಸಿದರು. 1926 ರಲ್ಲಿ 'ದೇಶಭಕ್ತಿಯ ಕಥೆಗಳು' ಮತ್ತು 1930 ರಲ್ಲಿ ಭಾರತೀಯ ಮಹಾಪುರುಷರು ಕೃತಿಗಳನ್ನು ಪ್ರಕಟಿಸಿ ದೇಶಾಭಿಮಾನವನ್ನು ಜಾಗೃತಗೊಳಿಸುವ ಪ್ರಯತ್ನ ಮಾಡಿದರು. ಆದರೆ ಓದು ಬರಹ ಬರದ ಆ ಕಾಲದಲ್ಲಿ ಜನಮನಕ್ಕೆ ಸಂಸ್ಕಾರ ಕೊಟ್ಟು, ವೈಚಾರಿಕತೆಯನ್ನು ಬೆರಸುವ ಉದ್ದೇಶದಿಂದ, ನಾಟಕ ಮಾಧ್ಯಮದಲ್ಲಿ ಕಾರ್ಯಾರಂಭ ಮಾಡಿದರು. 1928ರಲ್ಲಿ ದೇಶದ್ರೋಹಿ ನಾಟಕವನ್ನು ಮಕ್ಕಳಿಂದ ಆಡಿಸಿದರು. ಮೇಟಿ ವಿದ್ಯೆಯ ಮೇಲ್ಮೆ ಸಾರುವ 'ಜನಜೀವನ' ನಾಟಕವನ್ನು ಹಲವಾರು ಹಳ್ಳಿಗಳಲ್ಲಿ ಆಡಿಸಿದರು.

ಸಿಂಪಿ ಲಿಂಗಣ್ಣನವರ ಸಾಮಾಜಿಕ ಕಳಕಳಿ ಕೇವಲ ಬರಹಕ್ಕಷ್ಟೇ ಸೀಮಿತವಾಗಿರಲಿಲ್ಲ. ಅದು ಬರಗಾಲಕ್ಕೂ ಕೈಹಾಕಿತು. ವಿಜಾಪುರ ಜಿಲ್ಲೆ ಬರಗಾಲಕ್ಕೆ ಸದಾ ಬಲಿ. ಮಳೆ-ಬೆಳೆ ಇಲ್ಲ. ಕೂಳು-ನೀರಿಲ್ಲ. ದನಕರುಗಳಿಗೆ ಮೇವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರಕಾರ ತಗಾಯೀ ವಸೂಲಿಗೆ ಒತ್ತಾಯಿಸಿ ರೈತರಿಗೆ ಹಿಂಸೆಕೊಡಹತ್ತಿತು. ತಗಾಯಿ ಕೊಡದವರ ತಲೆಯ ಮೇಲೆ ಕಲ್ಲು ಹೊರಿಸಿ ಉರಿಬಿಸಿಲಲ್ಲಿ ನಿಲ್ಲಿಸುವ ಶಿಕ್ಷೆ. ಅಲ್ಲದೆ ಮನೆ ಜಪ್ತಿ ಮಾಡುವ ಹೆದರಿಕೆ ಹಾಕುತ್ತ, ಕಂದಾಯ ಅಧಿಕಾರಿ ಎಲ್ಲರನ್ನೂ ಗೋಳಾಡಿಸಹತ್ತಿದರು. ಆಗ ಸಿಂಪಿ ಶಿಕ್ಷಕರು ರೈತರನ್ನು ಒಗ್ಗೂಡಿಸಿ ಪ್ರತಿಭಟನೆಗೆ ಇಳಿದರು. ಸತ್ಯಾಗ್ರಹ ಮಾಡಿದರು. ವಿಜಾಪುರದ ಕಲೆಕ್ಟರರಿಗೆ ಬರಹದಲ್ಲಿ ಸಾಮೂಹಿಕ ದೂರು ನೀಡಿದರು. ತಹಶೀಲದಾರರು ಒಕ್ಕಲಿಗರ ಕ್ಷಮೆ ಕೇಳಬೇಕು. ತಗಾಯಿ ವಸೂಲಿಯನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹಿಸಿದರು. ತಗಾಯೀ ವಸೂಲಿ ನಿಂತಿತು. ಆದರೆ, ಶಿಕ್ಷಕ ಲಿಂಗಣ್ಣನವರನ್ನು ಇಂಗಳೇಶ್ವರ ಗ್ರಾಮಕ್ಕೆ ವರ್ಗಮಾಡಿದರು.

ಲಿಂಗಣ್ಣನವರು ಶಾಲೆಯ ಕೆಲಸಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಊರಿನ ಎಲ್ಲ ಆಗುಹೋಗುಗಳಲ್ಲಿ ಭಾಗಿಯಾಗಿರುತ್ತಿದ್ದರು. ಮಕ್ಕಳಲ್ಲಿ ರಾಷ್ಟ್ರಾಭಿಮಾನ ತುಂಬುವ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸದಾ ನಿರತರಾಗಿರುತ್ತಿದ್ದರು. ಅವರು ಮಕ್ಕಳ ಚಾರಿತ್ರಿಕ ವೃದ್ಧಿಯ ಕನಸುಗಾರರಾಗಿದ್ದರು.

1930 ರಲ್ಲಿ ಶಿಕ್ಷಕ ಲಿಂಗಣ್ಣನವರನ್ನು ಇಂಗಳೇಶ್ವರದಿಂದ ಹಲಸಂಗಿ ಶಾಲೆಗೆ ವರ್ಗಮಾಡಿದರು. ಅದು ಮಧುರಚೆನ್ನರ ಊರು. ಅಲ್ಲಿ ತಮ್ಮ ಕನಸುಗಳನ್ನೆಲ್ಲ ಬಿತ್ತಿ ಬೆಳೆಸಿ, ಆ ಗ್ರಾಮವನ್ನು ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿಸುವಲ್ಲಿ ಯಶಸ್ವಿಯಾದರು. ಅಲ್ಲಿ ಗಣೇಶೋತ್ಸವ, ನಾಡಹಬ್ಬಗಳನ್ನು ಆಚರಿಸುತ್ತ ಮಕ್ಕಳ ಮನದಲ್ಲಿ ಹೊಸ ಹುಮ್ಮಸ್ಸು ಹುಟ್ಟುಹಾಕಿದರು. ಇಡೀ ಹಳ್ಳಿಯಲ್ಲಿ ಶಿಸ್ತು ಒಗ್ಗಟ್ಟು ಸ್ಥಾಪಿಸಲೆತ್ನಿಸಿ ಸಾಂಸ್ಕೃತಿಕ ವಾತಾವರಣ ನಿರ್ಮಿಸಿದರು. ಈ ಕಾರ್ಯಕ್ರಮಗಳಲ್ಲಿ ಹಾಡು,

ಕುಣಿತ, ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡಿದರು. ತಾವೇ ಬರೆದ ನಾಟಕಗಳನ್ನಾಡಿಸುವುದರ ಜೊತೆಗೆ ಸುತ್ತಲಿನ ಹಳ್ಳಿಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾದರು. ಗ್ರಾಮೀಣ ಕಲಾಕಾರರೂ ಅದರಲ್ಲಿ ಪಾಲ್ಗೊಂಡು ತಮ್ಮ ಕಲೆಯನ್ನು ಮೆರೆದರು. ಧಾರವಾಡ, ವಿಜಾಪುರಗಳಿಂದ ಭಾಷಣಕಾರರನ್ನು ಆಮಂತ್ರಿಸಿ, ಗ್ರಾಮೋದ್ಧಾರ, ಶಿಕ್ಷಣ, ಕೃಷಿ ಮೊದಲಾದ ವಿಷಯಗಳಲ್ಲಿ ಉಪನ್ಯಾಸ ನೀಡಿಸಿದರು. ಇದಕ್ಕೆಲ್ಲ ಮಾರ್ಗದರ್ಶಕರಾಗಿ ಮಧುರಚೆನ್ನರಿದ್ದರೆ, ಕಾಪಸೆ ರೇವಪ್ಪ, ಪಿ. ದೂಲಾ ಅವರು ಲಿಂಗಣ್ಣನವರ ಪ್ರತಿ ಕಾರ್ಯದಲ್ಲಿ ಕೈಗೂಡಿಸಿದರು. ಹಲಸಂಗಿ ಗೆಳೆಯರ ಗುಂಪು ರೂಪುಗೊಂಡದ್ದು ಇದೇ ಸಂದರ್ಭದಲ್ಲಿ. ಇವರೆಲ್ಲ ಕೂಡಿ ಜನಪದ ಸಾಹಿತ್ಯ ಕಲೆ ಸಂಗ್ರಹಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 'ಗರತಿಯರ ಹಾಡು', 'ಮಲ್ಲಿಗೆ ದಂಡೆ' ಮತ್ತು 'ಜೀವನ ಸಂಗೀತ' ಜನಪದ ಕಡಲಾಳದ ಮುತ್ತುಗಳಂಥ ಈ ಮೂರು ಕೃತಿಗಳು ಹೊರಬಂದವು. ಈ ಜನಪದ ಸಾಹಿತ್ಯ ಕೃತಿಗಳು, ಜನಪದ ಸಾಹಿತ್ಯ ಕ್ಷೇತ್ರದ ಶಾಸ್ತ್ರೋಕ್ತ ಸಂಪಾದನೆಗಳೆನಿಸಿ ಇಂದೂ ಪ್ರಖ್ಯಾತಿಯನ್ನು ಕಳೆದುಕೊಂಡಿಲ್ಲ. ಜನಪದ ಸಾಹಿತ್ಯದ ಉದಾತ್ತತೆಯ ಪರಿಕಲ್ಪನೆಗೆ ಈ ಪುಸ್ತಕಗಳು ನಾಂದಿಹಾಡಿದವು. ಸಿಂಪಿ ಲಿಂಗಣ್ಣನವರನ್ನು ಜಾನಪದ ದಿಗ್ಗಜರಾಗಿಸುವಲ್ಲಿ ಈ ಕೃತಿಗಳು ಬಹಳಷ್ಟು ಮಟ್ಟಿಗೆ ಕಾರಣವಾಗಿವೆ. ಅಲ್ಲದೆ ಅವುಗಳ ಪ್ರೇರಣೆಯೇ ಜಾನಪದ ಕ್ಷೇತ್ರದಲ್ಲಿ ಅವರನ್ನು ಮುನ್ನಡೆಸಲು ಕಾರಣವಾಗಿವೆ.

ಅರವಿಂದ ಗ್ರಂಥಮಾಲೆ

ಹೊಸಗನ್ನಡ ಕಾವ್ಯದ ಹರಿಕಾರರಾಗಿ, ಮಧುರ ಚೆನ್ನರು, ಸಿಂಪಿ ಲಿಂಗಣ್ಣನವರು ಕಾವ್ಯಪ್ರಯೋಗಗಳನ್ನು ಆಗಲೇ ಆರಂಭಿಸಿದರು. ಲಿಂಗಣ್ಣನವರ ಇನ್ನೊಂದು ಮಹತ್ವದ ಸಾಧನೆ ಎಂದರೆ ಅರವಿಂದ ಗ್ರಂಥ ಮಾಲೆ ಸ್ಥಾಪನೆ. ಇದರಡಿಯಲ್ಲಿ ಸಂಗ್ರಹಿಸಿದ ಅರವಿಂದ ಸಾಹಿತ್ಯದ ಪ್ರಭಾವದಿಂದಾಗಿ ಹಲಸಂಗಿಯಲ್ಲಿ ಒಂದು ರೀತಿಯ ಆಧ್ಯಾತ್ಮ

ಮನೋಭಾವನೆಗೆ ಬಹಳ ಜನ ಒಳಗಾದರು. ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದರ ಪ್ರಭಾವಕ್ಕೊಳಗಾದ ಮಧುರ ಚನ್ನರು ಲಿಂಗಣ್ಣನವರು ಅವರನ್ನು ಕುರಿತು ನಾಟಕಗಳನ್ನು ಬರೆದು, ಖುದ್ದಾಗಿ ಅದರಲ್ಲಿ ಭಾಗವಹಿಸಿ ಜನಮನ ಸೂರೆಗೊಂಡರು. ಆಗ ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವವನ್ನು ಹಲಸಂಗಿಯಲ್ಲಿ ಆಚರಿಸಿದರು. ಸಂಪಾದಕರಾದ ಮಧುರ ಚೆನ್ನರು, ಲಿಂಗಣ್ಣನವರು ಆ ಗ್ರಂಥಮಾಲೆಯಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದರು. ಸಿಂಪಿಲಿಂಗಣ್ಣನವರು ಅವೆಲ್ಲವನ್ನು ತಲೆಯ ಮೇಲೆ ಹತ್ತೊಯ್ದು ಓದುಗರಿಗೆ ಒದಗಿಸಿದರು. ವಾರ್ಷಿಕ ಮೂರು ರೂಪಾಯಿ ಚಂದಾ ಹಣದಲ್ಲಿ ಆರು ಪುಸ್ತಕಗಳನ್ನು ಓದುಗರಿಗೆ ಒದಗಿಸುತ್ತಿದ್ದರು. ಈ ಸಂಘಟನೆಯ ವತಿಯಿಂದ 1936ರಲ್ಲಿ ಶ್ರೀ ವಿದ್ಯಾರಣ್ಯರ ಆರನೆಯ ಶತಮಾನೋತ್ಸವವನ್ನು ಆಚರಿಸಿದರು. ರೇವಪ್ಪ ಕಾಪಸೆ ಅವರ 'ನಂದನವನ', ಪದ್ಮರಾಜ ಹುನಗುಂದರ 'ಬಂಧನದಾಚೆ' ಮೊದಲಾದವರ ಒಳ್ಳೆಯ ಕೃತಿಗಳನ್ನು ಹೊರತಂದರು. ಆದರೆ ಹಣದ ಮುಗ್ಗಟ್ಟು, ಓದುಗರ ಪ್ರೋತ್ಸಾಹವಿಲ್ಲದೆ ಈ ಗ್ರಂಥಾಲಯ ಅನಿವಾರ್ಯವಾಗಿ ನಿಂತೇಹೋಯಿತು.

ಸಿಂಪಿಯವರು ಆಗ ವಿಷಾದ ಪಟ್ಟಿದ್ದು ಅಷ್ಟಿಷ್ಟಲ್ಲ. ಆದರೆ ಅದನ್ನು ಮರುನಿರ್ಮಾಣ ಮಾಡುವ ಚಿಂತನೆ ಅವರನ್ನು ಸದಾ ಕಾಡುತ್ತಲೇ ಇತ್ತು. ಅರವಿಂದ ಗ್ರಾಂಥಮಾಲೆಯ ವಿಚಾರ ಅವರ ಸ್ಮರಣ ಸಂಪುಟದಲ್ಲಿ ಸದಾ ಜಾಗ್ರತವಾಗೇ ಇತ್ತು. 1940ರಲ್ಲಿ ನಿವೃತ್ತರಾದ ನಂತರ ಮತ್ತೆ ಅದಕ್ಕೆ ಪುನರ್‌ಜನ್ಮ ಕೊಟ್ಟರು. ಇದಕ್ಕೆ ಕಾರಣ ಆಗ ಅವರಿಗೆ ಬಂದ ಪ್ರೋವಿಡೆಂಟ್ ಫಂಡ್‌ದ 3500 ರೂಪಾಯಿಗಳು. ಮತ್ತೆ ಪ್ರಕಟಣಾ ಕಾರ್ಯ ಆರಂಭಿಸಿದರು. ಲಿಂಗಣ್ಣನವರು ಏಕಾಕಿಯಾಗಿ ಅದನ್ನು 1980ರವೆಗೆ ನಡಿಸಿಕೊಂಡು ಬಂದುದು ಅದ್ಭುತ ಸಾಧನೆಯೇ ಸರಿ. ವಾರ್ಷಿಕ ಐದುರೂಪಾಯಿ ಚಂದಾ ಹಣದಲ್ಲಿ ಆರುಪುಸ್ತಕಗಳನ್ನು ಕೊಡುತ್ತಿದ್ದರು. ನಿವೃತ್ತಿಯ ನಂತರ ಬರಹ ಪ್ರಕಟನೆ ಮತ್ತು ಮಾರಾಟದ ಸಂಪೂರ್ಣ ಹೊಣೆ ಹೊತ್ತು ಕಾರ್ಯ ನಿರ್ವಹಿಸಿದರೂ ಶೂನ್ಯ ಸಂಘಾದನೆ!

ಅರವಿಂದ ಮಂಡಳಿ

ಚತುರ್ಭುಜರಂತಿದ್ದ ಮಧುರಚೆನ್ನ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಮತ್ತು ಧೂಲಾಸಾಹೇಬರ ಈ ಗೆಳೆಯರ ಗುಂಪು ಇನ್ನೊಂದು ಹೆಜ್ಜೆ ಮುಂದಿಟ್ಟು ಅರವಿಂದ ಮಂಡಳಿಯನ್ನು ರೂಪಿಸಿತು. ಅರವಿಂದರು ಶ್ರೀಮಾತಾ, ಪರಮಹಂಸ ಮತ್ತು ವಿವೇಕಾನಂದರ ತತ್ವಾದರ್ಶಗಳನ್ನು ಕುರಿತು ಚರ್ಚೆ ಉಪನ್ಯಾಸಗಳನ್ನು ಹಮ್ಮಿಕೊಂಡರು. ಆ ಆಧ್ಯಾತ್ಮದ ನೆಲೆಯಲ್ಲಿ ರಾಷ್ಟ್ರದ ಚಾರಿತ್ರ್ಯ ರೂಪಿಸುವ ಸಂಸ್ಕಾರದ ವಾತಾವರಣ ನಿರ್ಮಿಸಿದರು. ಈ ಅರವಿಂದ ಮಂಡಳಿಯ ಕಾರ್ಯಕ್ರಮಗಳಿಂದ ಆಕರ್ಷಿತರಾಗಿ ಹಲವಾರು ಬುದ್ಧಿಜೀವಿಗಳು ಹಲಸಂಗಿಗೆ ಹರಿದುಬಂದರು. ಅವರಲ್ಲಿ ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ರಂ.ಶ್ರೀ ಮುಗಳಿ, ಸ.ಸ. ಮಾಳವಾಡ, ಬಿ.ಡಿ. ಅಕ್ಕಿ ಪ್ರಮುಖರು. ಪಾಂಡೀಚೇರಿಗೆ ಹೋಗದ ಹಲವರು ಹಲಸಂಗಿಯ ಈ ಅರವಿಂದಾಶ್ರಮದಲ್ಲೇ ಶ್ರದ್ಧೆಯಿಟ್ಟು ಬಂದು ಹೋಗುತ್ತಿದ್ದರು. ಹೀಗೆ ಆಧ್ಯಾತ್ಮಾಕಾಂಕ್ಷಿಗಳಿಗೆ ಅದೊಂದು ಪವಿತ್ರ ಕ್ಷೇತ್ರವೇ ಆಯಿತು. ಅರವಿಂದ ಮಂಡಳಿಯ ಜವಾಬ್ದಾರಿ ಸದಸ್ಯರಾದ ಲಿಂಗಣ್ಣನವರು ಕೇವಲ ಶಾಲಾಶಿಕ್ಷಕರಾಗಿರಲಿಲ್ಲ, ಗಾಂಧೀಜಿಯವರ ಗ್ರಾಮೋದ್ಧಾರ ಕಲ್ಪನೆಯನ್ನು ಕಾರ್ಯಗತಗೊಳಿಸುವ ಪ್ರತಿನಿಧಿಯಾಗಿದ್ದರು.

ಭಾಷಣಕಾರರಾಗಿ ಲಿಂಗಣ್ಣ

ಡಾ. ಸಿಂಪಿ ಲಿಂಗಣ್ಣನವರು ಪ್ರಭಾವಶಾಲಿ ಭಾಷಣಕಾರರಾಗಿದ್ದರೂ ಹಳ್ಳಿಯ ಜನರಿಗೆ ಅವರ ಮಾತುಗಳು ಹಳ್ಳಹರಿದಂತೆ, ಅಳ್ಳು ಹುರಿದಂತೆ. ಗ್ರಾಮೀಣ ಬದುಕಿನ ಸಂಸ್ಕೃತಿ ಸಮಸ್ಯೆಗಳನ್ನು ಮುಂದಿಟ್ಟುಕೊಂಡು, ಜನಪದ ಶಬ್ದ ಭಂಡಾರವನ್ನೆಲ್ಲ ಸೆರೆಸೂರೆಗೈವ ಸಹಜ ಸುಂದರ ಚಾಕಚಕ್ಯದ ಮಾತು ಕೇಳುಗರನ್ನು ಮರಳುಮಾಡುತ್ತಿದ್ದವು. ಅವರ ಮಾತಿನಲ್ಲಿ ಜನಪದ ಸೊಗಡು, ದ್ವಂದ್ವಾರ್ಥ ಶ್ಲೇಷೆ ಎದ್ದು ಕಾಣುವುದಿರಲಿ, ಅವಕ್ಕೆ ಆಧ್ಯಾತ್ಮದ ಲೇಪನ ಅಂತಃಕರಣ ಸ್ಪರ್ಶವಿದ್ದು, ಕೇಳುಗರ ಮನ ಕಲಕುತ್ತಿದ್ದವು. ಸಾರ್ವಜನಿಕ ವೇದಿಕೆಗಳಲ್ಲಿ ಕಾಲೇಜು ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ

ಜನಪದ ಸಾಹಿತ್ಯ-ಸಂಸ್ಕೃತಿ ಕುರಿತು ಅವರು ಮಾಡಿದ ಅಮೋಘ ಭಾಷಣಗಳನ್ನು ನಾನು ಹಲವು ಸಲ ಕೇಳಿದ್ದೇನೆ. ಯಾವುದಕ್ಕೂ ತಟ್ಟನೆ ಪ್ರತಿಕರಿಸುವ ಚುರುಕುತನ, ಸಹಜ ಹಾಸ್ಯ ಹೊಮ್ಮಿಸುವ ಜಾಣ್ಮೆ ಬಹಳ ಜನರಿಗೆ ಸಾಧಿಸಿದ್ದಲ್ಲ. ವಿಡಂಬನೆ ಶ್ಲೇಷೆಯ ಮೋಡಿಗೆ ಬೆಚ್ಚಿಬೀಳದವರೇ ಇರಲಿಲ್ಲ. ಸಾಹಿತಿಯನ್ನು ಕುರಿತು, 'ಸಾಹಿತಿ ನೀವೊಬ್ಬ ಬರದಬರದ ಸಾಯ್ತಿ, ಅದನ್ನು ಓದೋದಿ ನಮಗ್ಯಾಕ ಸಾಯುಂತಿ' ಎಂದು ವಿಡಂಬಿಸುತ್ತಿದ್ದರು. ನಾನು ವಿದ್ಯಾರ್ಥಿಯಾಗಿದ್ದಾಗ ಲಿಂಗಣ್ಣನವರನ್ನು 'ಹಲಸಂಗಿ ಗೆಳೆಯರಲ್ಲಿ ಅಗ್ರಹಣ್ಯರು' ಎಂದು ವೇದಿಕೆಯ ಮೇಲೆ ಪರಿಚಯಿಸಿದ್ದೆ. ಅದಕ್ಕವರು ತಮ್ಮ ಭಾಷಣದಲ್ಲಿ 'ಹೌದು ಅವರು ಹೇಳಿದಂತೆ 'ಹೊಲಸಂಗಿ ಗೆಳೆಯರಲ್ಲಿ ಅಗ್ರಗಣ್ಯ ನಾನು' ಎಂದು ಪ್ರತಿಕ್ರಿಯಿಸಿ ಹಾಸ್ಯ ಹೊಮ್ಮಿಸಿದ್ದರು. 'ಏನ ಲಿಂಗ್ಣನವರ ಇಷ್ಟ ವಯಸ್ಸಾದ್ರೂ ಗಟ್ಟಿಮುಟ್ಟ ಅದೀರಿ ನೋಡ್ರಿ, ಹಲ್ಲ ಸಹಿತ ಬಿದ್ದಿಲ್ಲ' ಎಂದು ಕೇಳಿದಾಗ, 'ಹೌದ್ರಿ ನಾ ಹಲ್ಲ ಮುರ್ಸಗೋಳು ಕೆಲಸಾನ ಮಾಡಿಲ್ಲ' ಎಂದು ತಟ್ಟನೆ ಉತ್ತರಿಸುತ್ತಿದ್ದರು. ಹೀಗೆ ಆಡಿದರೆ ನೋಡಿದರೆ ಏನನ್ನಾದರೂ ಮಾಡಿದರೆ ಅದರಲ್ಲಿ ಜನಪದ ಜನಾನುಭವ ಧುಮ್ಮಿಕ್ಕಿ ಹೊರಹರಿಯುತ್ತಿತ್ತು.

ಸ್ವಾತಂತ್ರ್ಯ ಪೂರ್ವದಲ್ಲಿಯು, ಅವರ ಗಾಂದೀ ಬದುಕಿನ ಆದರ್ಶಗಳು, ತೀರ ಸರಳ ಜೀವನ ವಿಧಾನ ಎಲ್ಲವೂ ಮಕ್ಕಳಿಗೆ ಹಳ್ಳಿಗರಿಗೆ ಪರಿಣಾಮಕಾರಿಯಾಗಿದ್ದವು. ಅವರ ವ್ಯಕ್ತಿತ್ವಕ್ಕೆ ಗೌರವ, ಮಾತಿಗೆ ಬೆಲೆ ಇತ್ತು. ಮಹಾರಾಷ್ಟ್ರದ ಸೀಮೆಯಲ್ಲದ್ದು ಕನ್ನಡ ಭಾಷೆ ಸಂಸ್ಕೃತಿಯ ಸಂರಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಬಡತನದ ಹಲವಾರು ಸಮಸ್ಯೆಗಳನ್ನು ಲೆಕ್ಕಿಸದೆ, ಸ್ವಾನುಭವಿ, ಸ್ವಾಧ್ಯಾಯಿ ಸಿಂಪಿ ಜಾನಪದದ ಸಾಗರವೇ ಆದರು. ಅವರಿಗೆ ಹಲಸಂಗಿ ಹಳ್ಳಿಯೇ ಕಲಿಸುವ ಶಾಲೆ, ಕಲಿಯುವ ವಿಶ್ವವಿದ್ಯಾಲಯವಾಯಿತು. ಸದಾಚಿಂತನಶೀಲ ಕ್ರಿಯಾ ಪೂರ್ಣ ಬದುಕು ಅವರದಾಗಿತ್ತು. ಅವರು ಕ್ಷೇತ್ರಕಾರ್ಯ ಮಾಡಿ ಜಾನಪದ ತಜ್ಞರಾದವರಲ್ಲ. ಜನಪದವನ್ನೇ ಕಾರ್ಯಕ್ಷೇತ್ರವಾಗಿಸಿಕೊಂಡು ಬದುಕಿದವರು.

ಶ್ರೀ ಅರವಿಂದ ದರ್ಶನ

ಸಿಂಪಿ ಲಿಂಗಣ್ಣವರು ಚೆಲುವರಲ್ಲಿ ಚೆಲುವ. ಅಕ್ಕರೆ ಆಕರ್ಷಣೆ ಹುಟ್ಟಿಸುವ ಸ್ಫುರದ್ರೂಪ. ವಿಜಾಪುರದ ಗಜ್ಜರಿಗೆಂಪಿನ ಮೈಬಣ್ಣ, ಸದಾ ಎಲೆತಿಂದು ಲೇಪಿಸಿದಂಥ ರಂಗಿನ ರಂಜನೆಯ ತುಟಿಗಳು, ನಕ್ಕರೆ ಅದೇ ಸಿಂಪಿಬಿಟ್ಟು ಹೊರಬಂದ ಮುತ್ತಿನಂಥ ಹಲ್ಲುಗಳು. ದುಂಡಗಿನ ಮುಖ. ಮಧ್ಯಮಗಾತ್ರದ ನಿಲುವಿಗೆ ಶುಭ್ರ ಧೋತರ, ನೆಹರು ಶರ್ಟ್, ಗಾಂಧಿ ಟೊಪ್ಪಿಗೆಯ ಉಡುಪು. ಸದಾ ಹಸನ್ಮುಖಿ, ನಿರ್ಭಾವದ ನಿರಪುದ್ರವ ಚಹರೆಯ ಶುದ್ಧ ಸಾತ್ವಿಕ ವ್ಯಕ್ತಿತ್ವ. ಆದರೆ ಅವರ ಬದುಕು ಮಾತ್ರ ಸಂಕಷ್ಟಗಳ ಸೀಗರ ಕಂಟಿ! ಬಡತನದೊಡನೆ ಅವರದು ನಿರಂತರ ಹೋರಾಟ. ಅಂಥದರಲ್ಲಿ ಸಾಹಿತ್ಯ ಸಾಧನೆಗೆ ಟೊಂಕಕಟ್ಟಿದವರು. ಅವರು ಶಿಕ್ಷಕರ ಟ್ರೇನಿಂಗ್ ಕಾಲೇಜಿನಿಂದ 1942ರಲ್ಲಿ ಮುಂಬೈ ಕರ್ನಾಟಕದ ನಾಲ್ಕೂ ಜಿಲ್ಲೆಗೆ ಪ್ರಥಮರಾಗಿ ಪಾಸಾದುದು ಆಶ್ಚರ್ಯ ಹುಟ್ಟಿಸುವ ಸಂಗತಿ. ಆ ಉತ್ಸಾಹದಲ್ಲೇ ಶ್ರೀಮಾತಾರವಿಂದರ ದರ್ಶನ ಬಯಸಿ, ಮೊದಲು ಸಲ ಪಾಂಡೀಚೇರಿಗೆ ಹೋಗಿಬಂದರು. ಆ ದಿವ್ಯ ದರ್ಶನ ಅವರಿಗೆ ಎಂದೂ ಕಂಡರಿಯದ ಸ್ಫೂರ್ತಿ ಪ್ರೇರಣೆಗೆ ಕಾರಣವಾಯಿತಂತೆ. ಅರವಿಂದ ಶ್ರೀಮಾತೆಯರಲ್ಲಿ ಭಕ್ತಿ ಶ್ರದ್ಧೆ ಇಮ್ಮಡಿಸುವುದಿರಲಿ ಜೀವನೋತ್ಸಾಹದಲ್ಲಿ ಲಿಂಗಣ್ಣ ಪುಟಿದೆದ್ದರು. ಶ್ರೀ ಅರವಿಂದರ ತತ್ವಾನುಷ್ಠಾನಕ್ಕೆ ಮತ್ತಷ್ಟು ಅಂತರ್ಮುಖಿಯಾದರು.

ಕಾಳರಾತ್ರಿಯಲ್ಲಿ

1928ರಲ್ಲೇ ಮದುವೆಯಾದ ಲಿಂಗಣ್ಣವರಿಗೆ ಮಕ್ಕಳೂ ಆಗಿದ್ದವು. ಆದರೆ ಸಂಸಾರಿಕ ಯಾವ ತಾಪತ್ರಯಗಳನ್ನೂ ಮರೆತು, ಶಾಲೆ ಸಮಾಜ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಆತ್ಮಸಂಗಾತಕ್ಕೆ ಅರವಿಂದರ ತತ್ವಾನುಭೂತಿ, ಆಗ ಅವರು ಬರೆದ 'ಶ್ರೀ ಅರವಿಂದರ ಚರಿತ್ರೆ' ಹಲವಾರು ಜನರ ಹೊಗಳಿಕೆಗೆ ಪಾತ್ರವಾಯ್ತು. ಅಶಿಕ್ಷಿತ ಹೆಂಡತಿಗೆ ಅಕ್ಷರಾಭ್ಯಾಸ ಮಾಡಿಸುವುದಿರಲಿ, ಅವಳಿಗೆ ಶ್ರೀ

ಮಾತಾರವಿಂದರಲ್ಲಿ ಭಕ್ತಿ ಶ್ರದ್ಧೆ ಮೂಡಿಸಲು ಸದಾ ಹೆಣಗಿದರು. ಸಂಸಾರದ ಸಂಕಷ್ಟದಿಂದ ಅವಳ ಮನ ಮುದುಡದಂತೆ ನೋಡಿಕೊಂಡರು. 1946ರಲ್ಲಿ ಪತ್ನಿ ಶ್ರೀಮತಿ ಸುಲಭಾಳನ್ನು ಕರೆದುಕೊಂಡು ಪಾಂಡೀಚೇರಿಗೆ ಹೋಗಿ ಅರವಿಂದ ಶ್ರೀಮಾತೆಯರ ದರ್ಶನ ಮಾಡಿಸಿಕೊಂಡುಬಂದರು. ಆಗ ಲಿಂಗಣ್ಣನವರದು ಐದು ಮಕ್ಕಳ ದೊಡ್ಡ ಸಂಸಾರ. ಪ್ರಾಮಾಣಿಕ ದುಡಿಮೆಯ ಅಲ್ಪ ಆದಾಯದಲ್ಲಿ ದಂಪತಿಗಳು ಸಂತೃಪ್ತಿಯ ಮನೋಭಾವದಿಂದಿದ್ದರು.

ಈ ನೆಮ್ಮದಿಯ ಜೀವನ ಬಹಳ ಕಾಲ ಉಳಿಯಲಿಲ್ಲ. ಹರ ತನ್ನ ಭಕ್ತರನ್ನು ಒರೆಒರೆದು ನೋಡುವ ಎನ್ನುವಂತೆ, ಮುಂದೆ ಕೆಲವೇ ತಿಂಗಳಲ್ಲಿ ಹೆಂಡತಿ ಸುಲಭಾಳ ಸಾವಿನ ಸಿಡಿಲಿನಿಂದ ಲಿಂಗಣ್ಣನವರ ಸಂಸಾರ ಯಾರೂ ಕಲ್ಪಿಸಲಾಗದ ಆಘಾತಕ್ಕೊಳಗಾಯಿತು. ಲಿಂಗಣ್ಣನವರ ಬದುಕಿನ ಕಾಳರಾತ್ರಿ ಆರಂಭವಾಯ್ತು. ಐದೂ ಮಕ್ಕಳನ್ನು ಕಟ್ಟಿಕೊಂಡು ಚಡಚಣಕ್ಕೆ ಬಂದರು. ಅಲ್ಲಿಯೂ ನೆಲೆಯಿಲ್ಲ. ಮಕ್ಕಳನ್ನು ನೋಡಿಕೊಳ್ಳುವವರಿಲ್ಲ. ಅಂದು ಲಿಂಗಣ್ಣನನ್ನೇ ಚೆನ್ನಾಗಿ ನೋಡಿಕೊಳ್ಳದ ಅತ್ತಿಗೆಯಲ್ಲಿ ಇಂದು ಹೋಗುವುದಾದರೂ ಹೇಗೆ? ಕೊನೆಗೆ ಹೆಂಡತಿ ಸುಲಭಾಳ ತವರು ಮನೆಯಲ್ಲೇ ಮಕ್ಕಳಿಗೆ ತತ್ಪೂರ್ತಿಕ ಆಶ್ರಯ ಅನಿವಾರ್ಯವಾಯ್ತು. ಅಂಥದರಲ್ಲಿ ಕಿರಿಯ ಮಗು ವಿಷಮಜ್ವರದಿಂದ ತೀರಿಕೊಂಡಿತು. ಹಿರಿಯ ಮಗಳನ್ನು ಮದುವೆಮಾಡಿಕೊಟ್ಟರು. ನೌಕರಿ, ಮಕ್ಕಳ ಯೋಗಕ್ಷೇಮ ಬದುಕು ದಾರುಣವಾಯಿತು. ಅಂಥ ಪ್ರಸಂಗದಲ್ಲಿ ಮರುಮದುವೆಗೆ ಅನ್ಯರ ಒತ್ತಾಯ ಸಿಂಪಿಯವರಿಗೆ ಒಂದೆಡೆ ಆದರ್ಶ, ಇನ್ನೊಂದೆಡೆ ಅನಿವಾರ್ಯ. ಕೊನೆಗೂ ಮಕ್ಕಳ ಹಿತವನ್ನು ಲಕ್ಷಿಸಿ, ಇನ್ನೊಂದು ಆದರ್ಶಕ್ಕೆ ಕೈಹಾಕಿದರು. ಶಿವಮ್ಮ ಎನ್ನುವ ಬಾಲವಿಧವೆಯನ್ನು ಮದುವೆಯಾದರು. ಇನ್ನೊಬ್ಬ ಮಗಳ ಮದುವೆಯನ್ನೂ ಮಾಡಿದರು. ಉಳಿದೆರಡು ಗಂಡು ಮಕ್ಕಳೊಡನೆ ಶಿವಮ್ಮನೊಡನೆ ಹೊಸ ಸಂಸಾರ ಸುರು. ಮಾಸ್ತರರಿಗೆ ಮಕ್ಕಳು ಬಹಳ ಎನ್ನುವ ವಾಡಿಕೆ ನಮ್ಮ ಕಡೆಗೆ. 1950ರ ದಶಕದಲ್ಲಿ ಶಿವಮ್ಮನಿಗೂ ಐದು ಮಕ್ಕಳಾದವು. ತಾಪತ್ರಯ ತಪ್ಪಲಿಲ್ಲ. ಹಿರಿಯ ಮಕ್ಕಳ ಶಿಕ್ಷಣದ ಹೊರೆ ಇನ್ನೂ ಸಂಸಾರ ನೊಗ ಭಾರವೇ ಆಯಿತು.

ಅಷ್ಟರಲ್ಲೇ 1960 ರಲ್ಲಿ ನಿವೃತ್ತಿ ಬಂದೇ ಬಿಟ್ಟಿತು! ಅದೇ ವರ್ಷ ರಾಷ್ಟ್ರಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ಬಂತು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರಿಂದ ಪ್ರಶಸ್ತಿ ಸ್ವೀಕರಿಸಿಬಂದರು. ಆಗಿನಿಂದ ಹಲವಾರು ಪ್ರಶಸ್ತಿ ಬಹುಮಾನಗಳು ಅವರ ಬೆಂಬತ್ತಿದವು. ಆದರೆ ಆರ್ಥಿಕ ಸ್ಥಿತಿ ಮಾತ್ರ ಇನ್ನೂ ಗಂಭೀರವಾಯ್ತು! ಅಂಥ ಪರಿಸ್ಥಿತಿಯಲ್ಲೇ ಅರವಿಂದ ಗ್ರಂಥಮಾಲೆಯನ್ನು ಮತ್ತೆ ಆರಂಭಿಸಿದರು. ಸಿಂಪಿ ಲಿಂಗಣ್ಣನವರಿಗೆ ಯಾವ ಸಂಪತ್ತು ಇರದಿದ್ದರೂ ಆರೋಗ್ಯ ಸಂಪತ್ತು ಮಾತ್ರ ಭದ್ರವಾಗಿತ್ತು. ಅವರು ನಿವೃತ್ತರಾದಾಗ, ಅಂದಿನ ರಾಜ್ಯದ ಶಿಕ್ಷಣ ಮಂತ್ರಿಗಳಾಗಿದ್ದ ಎಸ್.ಆರ್. ಕಂಟಿ ಅವರು 'ಏನ ಲಿಂಗಣ್ಣ ಪೆನ್‌ಶನ್ ಆದ್ರೂ ಎಟ್ಟ ಗಟ್ಟಿ, ಅದಿರಲಾ' ಎಂದು ಕೇಳಿದಾಗ 'ಸಾಹೇಬ್ರ ಇನ್ನೊಮ್ಮಿ ನೇಮಣಕಿ ಮಾಡ್ರಿ, ಇನ್ನೊಮ್ಮಿ ರಿಟಾಯರ ಆಗ್ತೀನ ನೋಡ್ರಿ' ಎಂದಿದ್ದರು. ಅದರಂತೆ ಮುಂದೆ ಲಿಂಗಣ್ಣನವರು ಮತ್ತೊಂದು ಸೇವಾವಧಿಯ ಮೂವತ್ಮೂರು ವರ್ಷ ಬದುಕಿ, 5-5-1993ರಲ್ಲಿ ಲಿಂಗೈಕ್ಯರಾದರು.

ಸಾಹಿತ್ಯಿಕ ಸಾಧನೆ

ಹೆಸರು ಸಿಂಪಿ. ಆದರೆ ಅವರ ಸಾಹಿತ್ಯದ ಸಾಧನೆ ಸಾಗರೋಪಾದಿ. ಲಿಂಗಣ್ಣನವರು ಅರವಿಂದ ಗ್ರಂಥಮಾಲೆಯ ಪ್ರಕಾಶಕರಾಗಿ ಹಲವು ಅನ್ಯಲೇಖಕರ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ಸ್ವತಃ ಅವರೇ ರಚಿಸಿ ಪ್ರಕಟಿಸಿದ ಕೃತಿಗಳ ಸಂಖ್ಯೆ ಒಂದು ನೂರಕ್ಕೂ ಅಧಿಕ! ಲಿಂಗಣ್ಣನವರು ತಮ್ಮ ಸುದೀರ್ಘ ಬದುಕಿನುದ್ದಕ್ಕೂ ನಿರಂತರ ಸಾಹಿತ್ಯ ಸೃಷ್ಟಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರದು ವೈವಿಧ್ಯಪೂರ್ಣ ಬರಹ. ಅಂದಿನ ಎಲ್ಲ ಸಾಹಿತ್ಯ ರೂಪಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಕೃತಿಗಳನ್ನು ಯಾವ ಸಾಹಿತ್ಯರೂಪಕ್ಕೆ ಸೇರಿಸಬೇಕೋ ತಿಳಿಯದು. ಒಟ್ಟಿನಲ್ಲಿ ಶುದ್ಧ ಬದುಕನ್ನು ಪರಿಶುದ್ಧ ಸಾಹಿತ್ಯವಾಗಿ ರೂಪಿಸಿದರು. ಯಾವುದೇ ಸಾಹಿತ್ಯ ಬಣಕ್ಕೆ ತಮ್ಮನ್ನು ಗುರುತಿಸಿಕೊಂಡವರಲ್ಲ. ಆದರೂ ಅರವಿಂದ ಮಾರ್ಗದ ದರ್ಶನ, ಅವರ ಸಾಹಿತ್ಯ ಸಂಪುಟದಲ್ಲಿ ಶೋಭಿಸುವ ಪ್ರಮುಖಗುಣ. 'ಯೋಗ ದೀಕ್ಷೆ', 'ಪೂರ್ಣಯೋಗ, 'ಧರ್ಮ ಮತ್ತು ರಾಷ್ಟ್ರೀಯ ತತ್ವ' ಮೊದಲಾಗಿ

ಅರವಿಂದರ ಉದಾತ್ತ ತತ್ವ ವಿಚಾರಗಳನ್ನು ವಿವರಿಸುವ ವಿಫುಲ ಸಾಹಿತ್ಯ ಅವರ ಇಪ್ಪತ್ತಕ್ಕೂ ಹೆಚ್ಚು ಕೃತಿಗಳಲ್ಲಿ ಪ್ರಕಟಗೊಂಡಿದೆ. ಎರಡನೆಯದಾಗಿ, ಅವರು ನೋಡಿದ, ಹಾಡಿದ, ಆಡಿದ ತಿಂದುಂಡು ಬದುಕಿದ ಜಾನಪದ.

ಶ್ರೀ ಅರವಿಂದ ರಾಮತೀರ್ಥರನ್ನು ಕುರಿತು ಬರದಷ್ಟೇ ಪುಸ್ತಕಗಳು ಅವರು ಚಿತ್ರಿಸಿದ ಜೀವನ ಚರಿತ್ರೆಗಳು. ಮಧುರಚೆನ್ನ, ಅರವಿಂದ, ರಾಮಕೃಷ್ಣ, ವಿವೇಕಾನಂದ, ಬಸವಣ್ಣ, ಅಶೋಕ ಚಕ್ರವರ್ತಿ, ಗಾಂಧೀಜಿ ಮೊದಲಾದ ಪರಮ ಜೀವನದ ಆದರ್ಶಗಳನ್ನು ಚಿತ್ರಿಸಿದ ಲಿಂಗಣ್ಣನವರು ಸಾವರ ಕೆಡುವರನ್ನು ಬಣ್ಣಿಸಿ ಬರೆಯುವ ಪಣತೊಟ್ಟಂತಿದೆ. ಇದು ಭಾರತದ ಸಾಂಸ್ಕೃತಿಕ ಚರಿತ್ರೆ ನಿರ್ಮಿಸುವ ಅವರ ರಾಷ್ಟ್ರಧರ್ಮದ ದ್ಯೋತಕವಾಗಿದೆ. ಇಲ್ಲಿ ನಡೆದುದು ಉದಾತ್ತತೆಯ ಆರಾಧನೆಯೇ ಸರಿ.

ಬರೆದು ಪ್ರದರ್ಶಿಸಿ ಪ್ರಕಟಿಸಿದ ಏಳೆಂಟು ನಾಟಕಗಳು, ಐದಾರು ಕಥಾ ಸಂಕಲನಗಳು ಲಿಂಗಣ್ಣನವರ ಸಾಮಾಜಿಕ ದೃಷ್ಟಿಕೋನಕ್ಕೆ ಸಾಕ್ಷಿಯಾಗಿವೆ. ಅವರು ಬರೆದ ಏಕೈಕ ಕಾದಂಬರಿ ಬೆಟ್ಟದಹೊಳೆ. ಆಧ್ಯಾತ್ಮ ಲೇಪನದ ವಿಡಂಬನೆಯ ಕವನ ಗದ್ಯಗೀತೆಯ ಏಳು ಸಂಕಲನಗಳು ಲಿಂಗಣ್ಣನವರ ಕಾವ್ಯ ಪ್ರತಿಭೆಯನ್ನು ಹೊರಹೊಮ್ಮಿಸಿವೆ. ಅವರ ಪ್ರಮುಖ ಬರಹವೆನಿಸಿದ ಪ್ರಬಂಧದ ಹದಿನಾರು ಸಂಕಲನಗಳು, ಅವರ ಪರಿಣಾಮಕಾರಿ ಅಭಿವ್ಯಕ್ತಿಗೆ ವಿಷಯ ವೈವಿಧ್ಯತೆಗೆ, ಅವರ ಜೀವನದೃಷ್ಟಿಗೆ ಕನ್ನಡಿ ಹಿಡಿಯುತ್ತಿವೆ. ಜಾನಪದ ಅವರ ವಿಶೇಷ ಆಸಕ್ತಿಯ ವಿಷಯ. ನಾಡಿನ ಜಾನಪದ ದಿಗ್ಗಜರಲ್ಲೊಬ್ಬರಾದ ಲಿಂಗಣ್ಣನವರು ಹನ್ನೆರಡು ಕೃತಿಗಳನ್ನು ಪ್ರಕಟಿಸಿದ್ದಾರೆ. ಅದರಂತೆ ಸದಾ ಮಕ್ಕಳ ಸಹವಾಸದಲ್ಲಿದ್ದ ಶಿಕ್ಷಕ ಲಿಂಗಣ್ಣನವರು ಮಕ್ಕಳಿಗೆ, ಸಾಕ್ಷರ ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ಹದಿನೇಳು ಹೊತ್ತಿಗೆಗಳನ್ನು ಹೊರತಂದಿದ್ದಾರೆ. ಹೀಗೆ ಅವರ ಸಾಹಿತ್ಯ ಬಳ್ಳಿ ಕುಡಿವರೆದು ಹಬ್ಬಿ ವ್ಯಾಪಕವಾಗಿ ಬೆಳೆದಿದೆ.

ಜಾನಪದ ಗಾರುಡಿಗ

ಸಿಂಪಿ ಲಿಂಗಣ್ಣನವರನ್ನು ಜಾನಪದ ಗಾರುಡಿಗ ಎಂದು

ಹೇಳಲಾಗುತ್ತಿತ್ತು. ಅವರ ಜಾನಪದ ಅಭಿವ್ಯಕ್ತಿ ಅಭ್ಯಾಸ ಜನ್ಯವಲ್ಲ, ಅನುಭವ ಜನ್ಯ. ಮಧುರ ಚೆನ್ನ, ಕಾಪಸೆ ರೇವಪ್ಪ, ಪಿ.ಧೂಲಾ ಅವರೊಡಗೂಡಿ ಜನಪದ ಸಾಹಿತ್ಯ ಸಂಗ್ರಹ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಂದು ಸಂಪಾದಿಸಿದ 'ಗರತಿಯರ ಹಾಡು' ತ್ರಿಪದಿಗಳು, 'ಮಲ್ಲಿಗೆ ದಂಡೆ' ಸಂಪ್ರದಾಯದ ಹಾಡುಗಳು ಮತ್ತು 'ಜೀವನ ಸಂಗೀತ' ಲಾವಣಿಗಳು ಜನಪದ ಸಾಹಿತ್ಯ ಬೆಳೆಯ ಬೀಜದ ಹಿಡಿದೆನಗಳು. ಶಾಸ್ತ್ರೋಕ್ತ ಸಂಪಾದನೆಗೆ ಇಂದೂ ಅವು ಮಾದರಿ ಕೃತಿಗಳಾಗಿ ಪರಿಗಣಿಸಲ್ಪಡುತ್ತವೆ. ಅನಂತರ ಸಿಂಪಿ ಅವರು, 'ಉತ್ತರ ಕರ್ನಾಟಕದ ಜನಪದ ಕಥೆಗಳು', 'ಉತ್ತರ ಕರ್ನಾಟಕದ ಜನಪದ ಗೀತೆಗಳು' ಅಲ್ಲದೆ ಲಾವಣಿಗಳು, ಜಾತ್ರೆ, ಗಾದೆಗಳ್ನು ಕುರಿತು ಸಂಗ್ರಹಗಳನ್ನು ಹೊರತಂದರು. 'ಜನಾಂಗದ ಜೀವಾಳ', 'ಗರತಿಯ ಬಾಳು' ಮೊದಲಾಗಿ ಹತ್ತು ಹಲವಾರು ವಿಷಯಗಳ ವೈವಿಧ್ಯಪೂರ್ಣ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇಂದಿನ ಜನಪದ ಸಾಹಿತ್ಯ ಅಧ್ಯಯನದ ಹಾದಿಯಲ್ಲಿ ಇವೆಲ್ಲ ಮರೆಯದ ಮೈಲುಗಲ್ಲುಗಳು.

ಸಿಂಪಿಯವರು ರಚಿಸಿದ ಪ್ರಬಂಧಗಳು, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆಗಳಲ್ಲಿ ಅವರದೇ ಆದ ಜನಪದ ಶೈಲಿ, ಭಾಷಾಸತ್ವ ತುಂಬಿ ತುಳುಕುತ್ತಿದೆ. ಜನಪದ ಸಂಸ್ಕೃತಿ, ಶಬ್ದ ಸಂಪತ್ತು, ಅವರ ಎಲ್ಲ ಕೃತಿಗಳ ಜೀವನಾಡಿಯಾಗಿದೆ. ಅವರ ಮಾತುಗಳಲ್ಲಿ ಶುದ್ಧ ಜನಪದ ಧ್ವನಿ, ಧಾಟಿ, ವಿಚಾರಧಾರೆ, ಹಳ್ಳಹರಿದಂತೆ ಧುಮ್ಮುಕ್ಕುತ್ತಿದ್ದವು. ಶ್ರೀ ಅರವಿಂದ ದರ್ಶನ ಸಾಹಿತ್ಯದಲ್ಲಿ ಮಾರ್ಗದ ಗಾಂಭೀರ್ಯ ಒಡೆದುಕಾಣುತ್ತಿದ್ದರೆ, ಇನ್ನುಳಿದ ಎಲ್ಲ ಸಾಹಿತ್ಯ ರೂಪಗಳ ಅಭಿವ್ಯಕ್ತಿಯಲ್ಲಿ ದೇಶಿ ಪ್ರಧಾನವಾಗಿತ್ತು. ಜನಪದ ಶಬ್ದ ಸಂಪತ್ತು, ಪಡೆನುಡಿ, ಗಾದೆಮಾತುಗಳ ಹಾಳತು ಪ್ರಯೋಗ, ಅಡಗತೆ, ದೃಷ್ಟಾಂತಗಳ ಸೊಗಸು ಅವರ ಎಲ್ಲ ಕೃತಿಗಳ ವೈಶಿಷ್ಟ್ಯಗಾಗಿವೆ. ಒಟ್ಟಿನಲ್ಲಿ ಹೇಳುವದಾದರೆ ಅವರ ಸಾಹಿತ್ಯದ ಮೂಲದ್ರವ್ಯ ಜನಪದ ಬದುಕು. ಜಾನಪದವನ್ನು ವೈಜ್ಞಾನಿಕ ವಸ್ತುವಾಗಿ ಗುರುತಿಸುವ ನಿಟ್ಟಿನಲ್ಲಿ ಲಿಂಗಣ್ಣನವರ ಜನಪದ ಸಾಹಿತ್ಯ ಮಹತ್ವ ಪಡೆಯುತ್ತದೆ. ಅದು ಜನಜೀವನದ

ಜೀವಾಳ. ಮಾನವಿಕ ಶಾಸ್ತ್ರಕ್ಕೆ ಅದು ಆಕರ ಎನ್ನುವ ವಿಚಾರ ಸ್ಫುರಣಕ್ಕೆ ಅವರ ಬರಹ ಪ್ರೇರಕ. ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಗಣಿಯನ್ನು ಮೊದಲು ಸ್ಫೋಟಿಸಿದವರು ಸಿಂಪಿ ಲಿಂಗಣ್ಣ. ಅದಕ್ಕೆ ಸಾಹಿತ್ಯಿಕ ಶಿಸ್ತು, ಕಲೆಯ ಸನ್ಮಾನ ಸಿಗುವಂತೆ ಮಾಡಿದ ಅವರ ಶ್ರಮ ಸ್ತುತ್ಯಾರ್ಹ. ಅವರ ಗದ್ಯಶೈಲಿ ಅನ್ಯಾದರ್ಶ.

ಮಕ್ಕಳಿಗಾಗಿ ಸಾಹಿತ್ಯ

ಸದಾ ಮಕ್ಕಳೊಡನಿದ್ದು ಪಾಠ ಹೇಳಿದ ಸಿಂಪಿ ಶಿಕ್ಷಕರು, ಅವರ ಚಾರಿತ್ರ್ಯ ನಿರ್ಮಾಣದ ಕಡೆಗೆ ವಿಶೇಷಗಮನ ಹರಿಸಿದ್ದರು. ಮಕ್ಕಳ ಬುದ್ಧಿವಿಕಾಸಕ್ಕೆ ಜ್ಞಾನದ ವ್ಯಾಪ್ತಿಗೆ ಪೂರಕವಾಗುವಂತೆ, ತೀರ ಸರಳ ಭಾಷೆಯಲ್ಲಿ ಹದಿನೇಳು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಕವಿ ಮತ್ತು ಕವಿತೆ', 'ಅಕ್ಕ ತಂಗಿಯರಿಗಾಗಿ', 'ಭಗವಾನ ಬುದ್ಧದೇವ', 'ಮಕ್ಕಳ ಅರವಿಂದರು', 'ಮಹಾಪುರುಷರ ಜೀವನ ಪ್ರಸಂಗಗಳು', 'ಹರಿಜನೋದ್ಧಾರ', 'ಪೌರನೀತಿಯ ಅ ಆ' ಮೊದಲಾದವನ್ನು ಹೆಸರಿಸಬಹುದಾಗಿದೆ. ದೇಶಾಭಿಮಾನ ಮೂಡಿಸುವ ಈ ಎಲ್ಲ ಕೃತಿಗಳು ಮಕ್ಕಳ ತಿಳುವಳಿಕೆಗೆ ನಿಲುಕುಂಥವು. ಆಕಸ್ತಿಪೂರ್ಣ ವಿಷಯಕ್ಕೆ ಸರಳ ಭಾಷೆ ಬಳಸಿ, ಪುಸ್ತಕ ಓದುವ ಅಭಿರುಚಿ ಹೆಚ್ಚಿಸಲಿಚ್ಚಿಸಿದರು. ಇದನ್ನು ಮಕ್ಕಳ ಸಾಹಿತ್ಯವೆನ್ನುವುದಕ್ಕಿಂತ ಮಕ್ಕಳಿಗಾಗಿ ಬರೆದ ಸಾಹಿತ್ಯವೆನ್ನುವುದು ಹೆಚ್ಚು ಉಚಿತ. ಅವರು ಬರೆದ ರಾಷ್ಟ್ರದ ಮಹಾಪುರುಷರ ಚರಿತ್ರೆಗಳನ್ನು ಅವಲೋಕಿಸಿದರೆ ಮಕ್ಕಳಿಗೆ ರಾಷ್ಟ್ರಧರ್ಮದ ಪರಿಕಲ್ಪನೆ ಮಾಡಿಕೊಡುವ ವಿಚಾರ ಅವರದ್ದಾಗಿತ್ತೆನಿಸುತ್ತದೆ. ಜಾತಿ ವರ್ಣ ರಹಿತ. ನೈತಿಕ ಸಮಾಜ ನಿರ್ಮಿಸುವ ಕನಸುಗಳನ್ನು ಮಕ್ಕಳ ಮನದಲ್ಲಿ ಬಿತ್ತುವ ಸಾಹಸ ಅವರು ಮಾಸ್ತರರಾಗಿ ಮಾಡಿದ್ದು ಸದಾ ಪ್ರಸಂಶನೀಯ.

ಸೃಜನ ಸಾಹಿತಿ

ಸಿಂಪಿ ಲಿಂಗಣ್ಣನವರದು ನವೋದಯ ಮನೋಧರ್ಮ. ಅದು ಅವರ ಕಾವ್ಯ ಮತ್ತು ಕಥೆಗಳಲ್ಲಿ ಎದ್ದು ಕಾಣುತ್ತದೆ. ಅವರ ಸೃಜನ

ಸಾಹಿತ್ಯದಲ್ಲಿಯೂ ಕಾವ್ಯಗುಣಕ್ಕಿಂತ ಅಧ್ಯಾತ್ಮಾನುಭವವೇ ಪ್ರಧಾನವಾಗಿರುವುದನ್ನು ಅವರ 'ಮುಗಿಲ ಜೇನು', 'ಶ್ರುತಾಶ್ರುತ' ಕವನ ಸಂಕಲನಗಳಲ್ಲಿ ಕಾಣಬಹುದಾಗಿದೆ. 'ಚೊಕ್ಕವಾದ ಚೆಲುವಾದ ಮೇಲಾದ ಬಾಳನ್ನು ತೋರುವ ಇಂಥ ಗೀತಗಳು ನಮ್ಮ ಸಾಹಿತ್ಯದಲ್ಲಿ ನೂರು ಕಡೆಯಿಂದ ಬರಬೇಕು. ನೂರು ಕಾಲಕ್ಕೂ ಬರಬೇಕು' ಎಂದು ಮಾಸ್ತಿಯವರು 'ಮುಗಿಲ ಜೇನು' ವನ್ನು ಹಾಡಿ ಹೊಗಳಿದ್ದಾರೆ. ಬಸವಣ್ಣನವರ ಬದುಕು ಅವರ ಸಂದೇಶಗಳನ್ನು ಪ್ರಮುಖವಾಗಿಟ್ಟುಕೊಂಡು ಅನ್ಯ ಶರಣರ ಜೀವನ ಘಟನೆಗಳನ್ನು ಪ್ರತಿಪಾದಿಸುವ ಶ್ರುತಾಶ್ರುತ ವಿಶಿಷ್ಟಾಭಿವ್ಯಕ್ತಿಯ ಅರವತ್ತೂರು ಕವನಗಳನ್ನೊಳಗೊಂಡಿದೆ. ಬಸವಣ್ಣನವರ ಆದರ್ಶಗಳನ್ನು ಸ್ಪಷ್ಟವಾಗಿ ಪ್ರತಿಪಾದಿಸುವ ಈ ಕೃತಿ ಭಕ್ತಿಯ ಅಭಿವ್ಯಕ್ತಿಯಾಗಿದೆ. 'ಸಾಯ್ ಕೊಲ್' ಒಂದು ವಿಶಿಷ್ಟ ಕವನ ಸಂಕಲನ. ಹಳ್ಳಿಯ ಬದುಕಿನ ಶೋಷಣೆಯ ವಿಡಂಬನೆಯ ವಾಸ್ತವ ಚಿತ್ರಣ ಇದಾಗಿದೆ.

ಸಿಂಪಿಯವರು ಗದ್ಯ-ಗೀತ ಎಂಬ ಹೊಸ ರೂಪದ 'ಪೂಜಾ' ಮತ್ತು 'ನಮಸ್ಕಾರ' ಎರಡು ಕೃತಿಗಳನ್ನು ಹೊರತಂದು ಪ್ರಯೋಗಶೀಲ ಸಾಹಿತಿ ಎನಿಸಿದ್ದಾರೆ. ಇಲ್ಲಿ ಅವರ ಅನುಭಾವದ ಅಭಿವ್ಯಕ್ತಿ, ಭಕ್ತಿಯ ಉತ್ಕಟತೆಯ ಅರಿವಾಗುತ್ತದೆ. ಅರವಿಂದರ ಸಾನಿಧ್ಯದಲ್ಲಿ ಅವರ ಮನಸ್ಸು ಪಡೆದ ಸಂಸ್ಕಾರಕ್ಕೆ ಈ ಕೃತಿಗಳು ಸಾಕ್ಷಿಯಾಗುತ್ತವೆ. ಒಟ್ಟಿನಲ್ಲಿ ಅವರ ಕವಿತೆಗಳಲ್ಲಿ ಕಾವ್ಯಕ್ಕಿಂತ ಅನುಭಾವ ಅಧಿಕವಾಗಿದೆ. ಇವರ ಕವನಗಳ ಸ್ವರೂಪವೇ ಬೇರೆ.

ಸಿಂಪಿ ಲಿಂಗಣ್ಣನವರು ಬರೆದ ಕಥೆಗಳು ಸಾಹಿತ್ಯದ ಸಣ್ಣ ಕಥಾ ಸ್ವರೂಪದವೆನಿಸಿದರೂ ವಸ್ತು ನಿರೂಪಣೆಯಲ್ಲಿ ಅವು ಲೋಕಭಿನ್ನವಾಗಿವೆ. ಆದರೂ ಅಲ್ಲಲ್ಲಿ ಬೇರೆ ಕಡೆ ಪ್ರಕಟಗೊಂಡ 'ಕಣ್ಣುಗಳು' 'ತಿರುಗಣಿ', 'ಕಣಿಗಲಹೂ' ಕಥೆಗಳು ಸಿಂಪಿಯವರೂ ಸಣ್ಣಕಥೆಗಳನ್ನು ಬರೆಯಬಲ್ಲರು ಎಂಬುದನ್ನು ಸಾರಿ ಹೇಳುತ್ತವೆ. ಅವರ ಕಾದಂಬರಿ 'ಬೆಟ್ಟದ ಹೊಳೆ' ಗೆ ಆತ್ಮಕಥೆಯ ಸ್ವರೂಪವಿದೆಯಾದರೂ, ಅಣು ಬೃಹತ್ತಾಗಬಲ್ಲ ಸಾಹಸದ

ವ್ಯಕ್ತಿ ಚಿತ್ರವಾಗಿದೆ. ಲಿಂಗಣ್ಣನವರನ್ನು ಕವಿ, ಕಥೆಗಾರ, ಕಾದಂಬರಿಕಾರ ಎಂದು ಇಂದಿನ ಆ ಸಾಹಿತ್ಯದ ಹಿನ್ನೆಲೆಯಲ್ಲಿ ಹೇಳುವುದು ಕಷ್ಟ. ಅವರದು ಈ ನಿಟ್ಟಿನ ವಿಶಿಷ್ಟ ಪ್ರಯೋಗ.

ಸಿಂಪಿಲಿಂಗಣ್ಣನವರು ಅನುವಾದಕರೂ ಅಹುದು. 'ಮಿಲನ' ಎಂಬ ಖಂಡಕಾವ್ಯದಲ್ಲಿ ರಾಮತೀರ್ಥರ ಉಪನ್ಯಾಸಗಳನ್ನು ಕೇಳಿ ಅದರಲ್ಲಿ ದೃಷ್ಟಾಂತ ಕಥೆಗಳನ್ನು ಸರಳಗನ್ನಡಕ್ಕೆ ಅನುವಾದಿಸಿದ್ದಾರೆ. ಅದರಂತೆ ಅರವಿಂದರ 'ದೀಪವರ್ತಿ' ಮಾತೆಯರ 'ಸುಂದರ ಕಥೆಗಳನ್ನು' ಕನ್ನಡಿಸಿದ್ದಾರೆ.

ಸಂಪ್ರದಾಯ ಪ್ರೇರಕ

ವೃತ್ತಿ ಪ್ರವೃತ್ತಿ ಎರಡನ್ನೂ ಸಮರಸಗೊಳಿಸಿಕೊಂಡು ಬದುಕಿದ ಲಿಂಗಣ್ಣನವರು ಪ್ರಾಥಮಿಕ ಶಿಕ್ಷಕ ಸಮೂಹಕ್ಕೊಂದು ಸತ್ ಸಂಪ್ರದಾಯವನ್ನೇ ಹಾಕಿಕೊಟ್ಟರು. ವಿಜಾಪುರ ಜಿಲ್ಲೆಯ ಶಿಕ್ಷಕರನೇಕರು ಲಿಂಗಣ್ಣನವರನ್ನು ಅನುಸರಿಸಿ, ಉತ್ತಮ ಶಿಕ್ಷಕರು, ಒಳ್ಳೆಯ ಸಾಹಿತಿಗಳು ಆಗುವಲ್ಲಿ ಯಶಸ್ಸು ಪಡೆದಿದ್ದಾರೆ. ಅವರು ಮಕ್ಕಳಿಗೆ ಪ್ರಯೋಜನಕಾರಿ, ಸಮಾಜಕ್ಕೆ ಪರೋಪಕಾರಿಗಳಾಗಿದ್ದಲ್ಲದೆ, ಸ್ವತಃ ಗೌರವಪೂರ್ಣರೂ ಆಗಿದ್ದಾರೆ ಎಂಬುದನ್ನು ಸಿದ್ಧಿಸಿ ತೋರಿಸಿದ್ದಾರೆ. ಇವರ ಬದುಕಿನಿಂದ ಸ್ಫೂರ್ತಿ, ಪ್ರೇರಣೆ ಪಡೆದು, ಅವರನ್ನು ಅನುಸಿರಿಸದ ಹಲವಾರು ಶಿಕ್ಷಕ-ಸಾಹಿತಿಗಳು ವಿಜಾಪುರ ಜಿಲ್ಲೆಯಲ್ಲಿದ್ದಾರೆ. ಶಾಲಾಶಿಕ್ಷಕರು ಮಕ್ಕಳ ಸಾಹಿತಿಗಳಾಗಲು ಪರಿಸರ, ವಸ್ತು ಮತ್ತು ಅವಕಾಶಗಳು ಹಳ್ಳಿಗಳಲ್ಲಿ ಯತೇಚ್ಛವಾಗಿರುವುದನ್ನು ಲಿಂಗಣ್ಣನವರು ಕಂಡುಕೊಳ್ಳುವುದಿರಲಿ, ಅನ್ಯ ಶಿಕ್ಷಕರಿಗೂ ತೋರಿಸಿಕೊಟ್ಟಿದ್ದಾರೆ. ಈ ಉದಾತ್ತ ಸಂಪ್ರದಾಯದ ಹಾದಿಯಲ್ಲಿ ನಡೆದುಬಂದ ಕೆಲವು ಪ್ರಮುಖರನ್ನು ನೋಡಬಹುದಾಗಿದೆ: ಶ್ರೀ ಈಶ್ವರಚಂದ್ರ ಚಿಂತಾಮಣಿ, ಶ್ರೀ ಶಂ.ಗು. ಬಿರಾದಾರ, ಶ್ರೀ ಪರಶುರಾಮ ಜಾಲಿಹಾಳ, ದಿ. ಸಿಸು ಸಂಗಮೇಶ, ದಿ. ಸಂಗಮೇಶ ಹೊಸಮನಿ, ಶ್ರೀ ಶರಣಪ್ಪ ಕಂಜ್ಯಾಣಿ, ಶ್ರೀ ಬಾ.ಇ. ಕುಮಟೆ, ಶ್ರೀ ಬಿ.ಎಂ. ಪಾಟೀಲ, ಶ್ರೀ ಫ.ಗು. ಸಿದ್ದಾಪೂರ, ಶ್ರೀ ಎ.ಕೆ. ರಾಮೇಶ್ವರ ಮೊದಲಾದವರು ರಾಷ್ಟ್ರಮಟ್ಟದ

ಆದರ್ಶ ಶಿಕ್ಷಕರು. ಅವರು ರಾಷ್ಟ್ರ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಪ್ರಶಸ್ತಿ ಪಡೆದವರೂ ಆಗಿದ್ದಾರೆ. ಅವರಲ್ಲಿ ಕೆಲವರು ಪ್ರತಿಭಾವಂತ ಪ್ರೌಢಸಾಹಿತಿಗಳೂ ಆಗಿರುವುದು ವಿಜಾಪುರ ಜಿಲ್ಲೆಯ ವೈಶಿಷ್ಟ್ಯ. ಹೀಗೆ ಸಿಂಪಿಲಿಂಗಣ್ಣನವರು ತಾವು ಬೆಳೆದು ದೊಡ್ಡವರಾಗುವುದರ ಜೊತೆಗೆ ಹಲವರು ಆ ಹಾದಿಯಲ್ಲಿ ನಡೆದು ಗಣ್ಯರೆನಿಸುವಂತೆ ಮಾಡಿದರು.

ಲೇಖನ ಸಾಹಿತ್ಯ

ಸಿಂಪಿ ಲಿಂಗಣ್ಣನವರ ಲೇಖನ ಸಾಹಿತ್ಯವೂ ಅಷ್ಟೇ ಸಮೃದ್ಧ. ಕಥೆ, ಕವನ, ಕಿರು ಪ್ರಬಂಧಗಳನ್ನಲ್ಲದೆ ಸಾಮಾಜಿಕ ಸಮಸ್ಯೆ, ಜನಪದ ವಿಚಾರಗಳನ್ನು ಕುರಿತು ನಾಡಿನ ಪ್ರಖ್ಯಾತ ಪತ್ರಿಕೆಗಳಲ್ಲಿ ನೂರಕ್ಕೂ ಅಧಿಕ ಲೇಖನಗಳನ್ನು ಬರೆದಿದ್ದಾರೆ. ವಿಶೇಷವಾಗಿ ಮಾಸ್ತಿ ವೆಂಕಟೇಶ ಅಯ್ಯಂಗಾರರ ಸಂಪಾದಕತ್ವದ 'ಜೀವನ', ಸಂಪಾದಕ ಫ.ಗು. ಹಳಕಟ್ಟಿ ಅವರ 'ಶಿವಾನುಭವ', ಅದರಂತೆ 'ಜಯಕರ್ನಾಟಕ', 'ಜಯಂತಿ' ಮೊದಲಾದ ಪತ್ರಿಕೆಗಳಲ್ಲಿ ಲಿಂಗಣ್ಣನವರು ಬರೆದದ್ದು ಹಲವಾರು ಲೇಖನಗಳು. ಸಿಂಪಿ ಲಿಂಗಣ್ಣನವರ ಲೇಖನಗಳು ಅಂದಿನ ಜನಮನವನ್ನು ಗೆಲ್ಲುವುದಿರಲಿ ಅವರು ಆಯ್ದುಕೊಂಡ ವಸ್ತು, ಬಳಸಿದ ಭಾಷೆ ಉತ್ತರ ಕರ್ನಾಟಕದ ವಿಶೇಷ ಕೊಡುಗೆ ಎನ್ನುವಂತಿತ್ತು. ಒಬ್ಬ ಶಾಲಾ ಶಿಕ್ಷಕನ ಇಷ್ಟೊಂದು ವ್ಯಾಪಕ ಬರಹ ಆಶ್ಚರ್ಯ ಹುಟ್ಟಿಸುವಂಥದ್ದು. ಇವಕ್ಕೆಲ್ಲ ಭದ್ರ ಬುನಾದಿ, ಅವರ ಅನುಭವ, ಅಧ್ಯಯನ ಮತ್ತು ಸಾಹಿತ್ಯಾಸಕ್ತಿ. ಅವರ ಜೀವನ ಶ್ರದ್ಧೆ, ಬರೆಯಬೇಕೆನ್ನುವ ಛಲ, ಅವರ ಸಾಹಿತ್ಯ ನೀತಿಗೆ ಪ್ರೇರಣೆಯಾದವು. ಲಿಂಗಣ್ಣನವರ ಜನಪದ ಪ್ರೀತಿ, ರಾಷ್ಟ್ರಪ್ರೇಮ, ನಾಡು ನುಡಿ ಶ್ರೀಮಂತಗೊಳಿಸುವ ಛಲಗಳ ಮುಪ್ಪುರಿಯ ಬರಹ ಅವರದು. ಕರ್ನಾಟಕ ಸಂಸ್ಕೃತಿ, ರಾಷ್ಟ್ರದ ಮಹಾಪುರುಷರ ಆದರ್ಶಗಳನ್ನು ಬಿತ್ತಿ ಬೆಳೆಯುವಲ್ಲಿ ಅವರ ಸಾಹಿತ್ಯ ಸಫಲವಾಗಿದೆ. ಅವರ ಬಹಳಷ್ಟು ಬರಹಗಳ ದೃಷ್ಟಿ ಮಹಿಳೆ ಮತ್ತು ಮಕ್ಕಳ ಉದ್ಧಾರದ ಮೇಲೆ ಕೇಂದ್ರೀಕೃತವಾಗಿದೆ. ವೈಚಾರಿಕತೆಗಿಂತ ಪರಿಶುದ್ಧ ಮಾನವೀಯ ಮೌಲ್ಯ ಪ್ರತಿಪಾದನೆ, ದೇಶಪ್ರೇಮ,

ಪಡಿಮೂಡಿಸುವ ಪ್ರಯತ್ನ, ಲಿಂಗಣ್ಣನವರ ಸಾಹಿತ್ಯದಲ್ಲಿ ಎದ್ದು ಕಾಣುತ್ತವೆ.

ವಿಮರ್ಶೆಯೇ ಬೇಕಿರಲಿಲ್ಲ

ಡಾ. ಸಿಂಪಿ ಲಿಂಗಣ್ಣನವರು ಇಷ್ಟೊಂದು ವ್ಯಾಪಕ ವೈವಿಧ್ಯಮಯ ಸಾಹಿತ್ಯ ರಚಿಸಿದರೂ ಸಾಹಿತ್ಯಲೋಕ ಅವರನ್ನು ಬೇಗ ಗುರುತಿಸಲಿಲ್ಲ. ವಿರ್ಶಕರಾರೂ ಆ ಕಡೆ ನೋಡಲಿಲ್ಲ. ಇದಕ್ಕೆ ಕಾರಣಗಳು ಹಲವು. ಅವರು ಮಹಾರ್ಾಷ್ಟ್ರದ ಗಡಿಭಾಗದಲ್ಲಿದ್ದ ಹಳ್ಳಿಯ ಬಡಜೀವಿ. ಮಾಸ್ತರಿಕೆಯ ಕೆಲಸ. ಚಡಚಣ ಎಲ್ಲಿದೆ ಎಂಬುದು ಇಂದೂ ಕನ್ನಡಿಗರಿಗೆ ಗೊತ್ತಿಲ್ಲದ ಊರು. ಲಿಂಗಣ್ಣನವರು ಬರೆಯುತ್ತಿದ್ದ 1930ರ ದಶಕದಲ್ಲಿ ಆ ಊರಿಗೆ ಒಂದು ಪತ್ರಿಕೆ ಕೂಡ ಬರುತ್ತಿರಲಿಲ್ಲ. ಸಂಪರ್ಕ ಸಾಧನೆಗಳಂತೂ ಇರಲೇ ಇಲ್ಲ. ಅಂಥ ಪರಿಸರದಲ್ಲಿದ್ದು ಸಿಂಪಿ ಸಾಗರವಾದುದು ಸಣ್ಣಮಾತೇನಲ್ಲ. ಹಲಸಂಗಿ, ಚಡಚಣಗಳನ್ನು ಕನ್ನಡ ಸಾಹಿತ್ಯ ಸೀಮಾವಲಯಕ್ಕೆ ಸೇರಿಸಿದವರೇ ಮಧುರ ಚೆನ್ನ ಮತ್ತು ಸಿಂಪಿ ಲಿಂಗಣ್ಣ. ಇವರು ಕಲಿತದ್ದು ಕಡಿಮೆ, ಓದಿದ್ದು ಹೆಚ್ಚು.

ಸಿಂಪಿಯವರು ಬರೆಯುವಾಗ ವಿಮರ್ಶೆ ಒಂದು ಸಾಹಿತ್ಯ ರೂಪವಾಗಿ ಕನ್ನಡದಲ್ಲಿ ಇನ್ನೂ ಬೆಳೆದಿರಲಿಲ್ಲ. ಅಷ್ಟೇ ಏಕೆ, ಸಿಂಪಿ ಲಿಂಗಣ್ಣನವರ ಕೆಲವು ಕೃತಿಗಳನ್ನು ಯಾವ ಸಾಹಿತ್ಯ ರೂಪಕ್ಕೆ ಸೇರಿಸಬೇಕೆಂಬುದೂ ಇಂದೂ ಸಮಸ್ಯೆಯಾಗಿಯೇ ಉಳಿದಿದೆ. ಎರಡನೆಯದಾಗಿ ಸಿಂಪಿಯವರ ಸಾಹಿತ್ಯದ ಬಹುಭಾಗ ಚರಿತ್ರೆ, ಅರವಿಂದರ ಆಧ್ಯಾತ್ಮ ವಿಚಾರಗಳನ್ನೊಳಗೊಂಡುದು. ಉಳಿದದ್ದು ದೇಶೀ ಸಾಹಿತ್ಯ. ಸ್ವಾತಂತ್ರ್ಯ ಪೂರ್ವದ ಅವರ ಸಾಹಿತ್ಯದಲ್ಲಿ ವೈಚಾರಿಕತೆ ಇಂದಿನಂತೆ ಇಲ್ಲದಿರುವುದು ಸ್ವಾಭಾವಿಕ. ಅದಕ್ಕೆ ಓದುಗರ ಆಕರ್ಷಣೆ ಇತ್ತಲ್ಲದೆ, ವಿಮರ್ಶಕರ ಅವಶ್ಯಕತೆ ಇರಲಿಲ್ಲ. ಇಂದೂ ಸಹಿತ ಕನ್ನಡ ಸಾಹಿತ್ಯ ವಿಮರ್ಶಕರಿಗೆ, ಸಾಹಿತ್ಯಕೃತಿಗಿಂತ ಸಾಹಿತ್ಯ ಪ್ರಧಾನವಾಗಿರುವ ಸಾಧ್ಯತೆಯೇ ಹೆಚ್ಚು. ಈ ದೃಷ್ಟಿಯಿಂದ ಲಿಂಗಣ್ಣನವರನ್ನು ನಿರ್ಲಕ್ಷಿತರೆಂದು ಹೇಳುವುದು ಸೂಕ್ತವಲ್ಲ. ಅವರನ್ನು ಮಾಸ್ತಿ, ಬೇಂದ್ರೆ, ಆಲೂರ ವೆಂಕಟರಾಯ,

ಶಂಬಾಜೋಷಿ, ವಿ.ಕೃ. ಗೋಕಾಕ, ರಂ.ಶ್ರೀ. ಮುಗಳಿ, ಸ.ಸ. ಮಾಳವಾಡ ರಂಥ ಅನೇಕ ವಿದ್ವಜ್ಜನ ಗುರುತಿಸಿ ಹಾಡಿಹೊಗಳಿದ್ದಾರೆ. ಅಲ್ಲದೆ ಅವರ 'ಸ್ವರ್ಗದೋಲೆ', 'ಗರತಿಯ ಹಾಡು', 'ಜೀವನ ಸಂಗೀತ' ಗ್ರಂಥಗಳು ವಿಶ್ವಿದ್ಯಾಲಯದ ಪಠ್ಯಗಳಾಗಿ ಪ್ರಶಂಸೆಗೊಳಗಾಗಿವೆ. ಅವರ 'ಗಾದೆಗಳ ಗಾರುಡಿ', 'ಹೆಡಿಗೆ ಜಾತ್ರೆ' 'ನಾಟ್ಯ ಸಾಧನೆ', 'ನೂರು ಗಡಿಗೆ ಒಂದು ಬಡಿಗೆ', 'ಮಧುರ ಚೆನ್ನರ ಜೀವನ ಮತ್ತು ಕಾರ್ಯ' ಮೊದಲಾದ ಕೃತಿಗಳು ದಿಟ್ಟಿಸಿನೋಡಿದರೆ ಅವರ ವೈಚಾರಿಕ ಪ್ರೌಢಿಮೆ ಸರಳಸುಂದರ ಅಭಿವ್ಯಕ್ತಿ ಮತ್ತು ಅವರ ರಸಿಕಾನುಭವಕ್ಕೆ ಸಾಕ್ಷಿಯಾಗಿವೆ.

ಹೀಗೆ ಸಿಂಪಿ ಲಿಂಗಣ್ಣನವರ ಕೃತಿಗಳು ಮಕ್ಕಳು ಮಹಿಳೆ ಪಂಡಿತರ ಅಭಿರುಚಿಗೆ ಪಾತ್ರವಾಗಿವೆ. ಕನ್ನಡದಲ್ಲಿ ವಿಪುಲವಾಗಿ ಅರವಿಂದ ಸಾಹಿತ್ಯ ಬರೆದು ಪ್ರಕಟಿಸಿದ ಗೌರವಕ್ಕೆ ಅವರಿಗೆ ಮಹಾ ಮನ್ನಣೆ ಇದೆ. ಅವರ ಜೀವನಾನುಭವ, ಕನ್ನಡದ ಕಳಕಳಿ, ದೇಶಪ್ರೇಮಗಳು ಅನನ್ಯವೆನ್ನುವಂತೆ ಅವರ ಪುಸ್ತಕಗಳ ಪುಟಪುಟಗಳಲ್ಲಿ ಪುಟಿದೆದ್ದು ಕಾಣುತ್ತವೆ. ಸಿಂಪಿ ಲಿಂಗಣ್ಣನವರು ಜಾನಪದದ ದಶದಿಕ್ಕುಗಳನ್ನು ತೆರೆದು ತೋರಿಸಿ, ಭಾರತ ಜನನಿ ಮತ್ತು ಅವಳ ತನುಜಾತೆ ಕನ್ನಡ ಮಾತೆಯ ಸಂಸ್ಕೃತಿಯ ಪರಂಪರೆಯ ಅರಿವು ಮೂಡಿಸುವ ಮಹತ್ಕಾರ್ಯ ಮಾಡಿದ್ದಾರೆ. ವಿಮರ್ಶಕರು ಅವರನ್ನು ನೋಡಲಿ ಬಿಡಲಿ, ಸಹೃದಯಿ ಕನ್ನಡಿಗರಿಗೆ ಸಂಸ್ಕಾರ ನೀಡುವ ಕಾರ್ಯ ಮಾಡಿದ್ದಾರೆ.

ವ್ಯಕ್ತಿತ್ವ

ವ್ಯಕ್ತಿಯ ವ್ಯಕ್ತಿತ್ವ ಅವನ ಕೃತಿಯಲ್ಲಿ ಅಭಿವ್ಯಕ್ತವಾಗುತ್ತದೆ. ಈ ಮಾತು ಡಾ. ಸಿಂಪಿಯವರಿಗೆ ಸಂಪೂರ್ಣ ಅನ್ವಯವಾಗುತ್ತದೆ. ಅವರು ತಮ್ಮ ಬರಹಕ್ಕೆ ಆಯ್ದುಕೊಂಡ ವಸ್ತು ಮತ್ತು ಅದನ್ನು ನಿಭಾಯಿಸಿದ ರೀತಿ ಅವರ ಸಜ್ಜನಿಕೆಯನ್ನು ಸಾರಿಹೇಳುತ್ತವೆ. ಅಶೋಕ ಚಕ್ರವರ್ತಿ, ಬುದ್ಧ, ಬಸವಣ್ಣರಾದಿಯಾಗಿ ಅರವಿಂದ, ವಿವೇಕಾನಂದ, ಗಾಂಧಿವರೆಗಿನ ಭಾರತದ ಸಂಸ್ಕೃತಿ, ಅಧ್ಯಾತ್ಮಲೋಕದ ಆದರ್ಶ ಗಣ್ಯಾತಿಗಣ್ಯರೂ ಅವರ

ಸಾಹಿತ್ಯದ ಮೂಲದ್ರವ್ಯವಾಗಿದ್ದಾರೆ. ಅದರಂತೆ ಗ್ರಾಮೀಣ ಕಲೆ ಸಂಸ್ಕೃತಿಗಳನ್ನು ಬಿಂಬಿಸುವ ಜಾನಪದ ಅವರು ಅಪ್ಪಿಕೊಂಡ ಇನ್ನೊಂದು ಮಹತ್ವದ ವಿಷಯ. ಡಾ. ಲಿಂಗಣ್ಣನವರು ಜನಪದ ಮಣ್ಣಲ್ಲಿ ನಿಂತೇ ಭಾರತದ ಆಧ್ಯಾತ್ಮ ಆಕಾಶಕ್ಕೆ ಕೈಹಾಕಿದ್ದಾರೆ. ನೆಲ ಮುಗಿಲನ್ನು ಬೆಸೆವ ಸಾಹಸ ಅವರದು!

ಡಾ. ಲಿಂಗಣ್ಣನವರು ಆದರ್ಶ ಶಿಕ್ಷಕರಾಗಿ, ಚಾರಿತ್ರ್ಯಪೂರ್ಣ ಸತ್ವಯುತ ಬರಹದ ತತ್ವನಿಷ್ಠ ಸಾಹಿತಿಯಾಗಿ, ಸದ್ಗ್ರಂಥಗಳ ಪ್ರಕಾಶಕರಾಗಿ ಜನಪದ ಭಾಷೆ ಧಾಟಿಯ ಪ್ರಭಾವಶಾಲಿ ವಾಗ್ಮಿಗಳಾಗಿ ಚತುರ್ಮುಖ ಬ್ರಹ್ಮರಾಗಿದ್ದಾರೆ. ಸಲ್ಲದ್ದನ್ನಾಡದ ನಾಲಿಗೆ, ಅಲ್ಲದ್ದನ್ನು ಬರೆಯದ ಲೇಖಣಿ, ಕೈ ಕಚ್ಚೆ ಪರಿಶುದ್ಧ ಬದುಕಿನ ಲಿಂಗಣ್ಣ, ಲಿಂಗ ಮೆಚ್ಚಿ ಅಹುದಹುದೆನ್ನುವಂತೆ ಬದುಕಿದ್ದೊಂದು ಪವಾಡವೆಂದರೆ ನಂಬುವದೇ ಕಷ್ಟ. ಅವರ ನಿರಾಡಂಬರ ನಿಸ್ವಾರ್ಥ ಚಾರಿತ್ರ್ಯಿಕ ಪೂರ್ಣ ಬದುಕಿನ ಪ್ರತಿಬಿಂಬವೇ ಅವರ ಬರಹ. ನಡೆ–ನುಡಿಯಲ್ಲಿ ತಾರತಮ್ಯವಿಲ್ಲದ ಶರಣ ಲಿಂಗಣ್ಣನನ್ನು ನಾನು ತೀರ ಹತ್ತಿರವಿದ್ದು ಬಲ್ಲೆ. ಅವರ ಮುಗ್ಧತೆಗೆ ಅಚ್ಚರಿ ಪಟ್ಟಿದ್ದೇನೆ. ಆಸೆಗೆ ಕೈಯೊಡ್ಡದ ಅಧಿಕಾರಕ್ಕೆ ತಲೆಬಾಗದ, ಪ್ರೀತಿ ವಿಶ್ವಾಸ ಪ್ರಾಮಾಣಿಕತೆಯ ಕಿಂಕರರಾಗಿದ್ದ ಸುಸಂಸ್ಕೃತ ವ್ಯಕ್ತಿತ್ವ ಅವರದು. ಅವರಿಗೆ ಬರಹಕ್ಕಿಂತ ಬದುಕು ದೊಡ್ಡದಾಗಿತ್ತು. ಅದಕ್ಕಾಗಿಯೇ ದೊಡ್ಡವರ ಬದುಕನ್ನು ಚಿತ್ರಿಸಲು ತಮ್ಮ ಬಹಳಷ್ಟು ಬರಹವನ್ನು ಮೀಸಲಿಟ್ಟರು.

ಡಾ. ಸಿಂಪಿ ಲಿಂಗಣ್ಣನವರು ದಾರಿದ್ರ್ಯವನ್ನಲ್ಲದೆ ಮತ್ತೇನನ್ನೂ ಕಂಡವರೇ ಅಲ್ಲ. ಐಷಾರಾಮೀ ಜೀವನದ ಕಲ್ಪನೆ ಕೂಡ ಅವರಿಗಿರಲಿಲ್ಲ. ಶಿಕ್ಷಕ ವೃತ್ತಿ ಅಲ್ಪ ಆದಾಯ, ಮುರುಕು ತೊಲೆ, ಹರಕು ಜಂತಿಯ ಮನೆ ವಾಸ, ಯಾವ ಹವ್ಯಾಸಕ್ಕೂ ಅವಕಾಶಗಳೇ ಇರದ ಹಳ್ಳಿಯ ಬಾಳು, ಅಂಥದರಲ್ಲಿಯೂ ಅವರಿಗೆ ಅಪಾರ ಜೀವನ ಶ್ರದ್ಧೆ. ವಂಚನೆ ಮೋಸ ಅಪ್ರಾಮಾಣಿಕತೆ ಎಂದೂ ಅವರ ಹತ್ತಿರ ಸುಳಿಯಲೇ ಇಲ್ಲ. ಮಧುರ ಚೆನ್ನರಂಥ ಅನುಭಾವಿಯ ಒಡನಾಟ, ಆಧ್ಯಾತ್ಮಕ್ಕೆ ಅರವಿಂದ ಮಾರ್ಗ,

ಸಂಸಾರಕ್ಕಿಂತ ಸಾಹಿತ್ಯದ ಕಡೆಗೇ ಅವರ ಗಮನ. ಬದುಕನ್ನು ಒಂದು ಪವಿತ್ರ ತಪಸ್ಸಾಗಿ ಪರಿಗಣಿಸಿದವರು ಅವರು. ಅರವಿಂದ ಯೋಗದ ಈ ಅಂತರ್ಮುಖಿ ಇದ್ದುದರಲ್ಲೇ ಸದಾ ಸುಖಿ!

ಡಾ. ಲಿಂಗಣ್ಣನವರು ಎಲ್ಲದರಲ್ಲಿಯೂ ಶಿಸ್ತಿನ ಸಿಪಾಯಿ. ಸಮಯ ಪ್ರಜ್ಞೆ ಅನ್ಯರು ಅನುಸರಿಸುವಂಥದ್ದು. ಕುಟುಂಬದಲ್ಲಾಗಲಿ, ಶಾಲೆಯಲ್ಲಾಗಲಿ ಸಿಟ್ಟು ಸಿಡುಕು ಮಾಡಿದ್ದನ್ನು ಯಾರೂ ಕಂಡಿಲ್ಲ. ಜಾತಿ, ಮೇಲು-ಕೀಳು ಪಕ್ಷಪಾತ ಮನೋಭಾವದಿಂದ ಅತೀತರಾಗಿದ್ದವರು. ಅಂತೆಯೇ ಸಮಕಾಲೀನ ಸಮಾಜ ಅವರನ್ನು ಪ್ರೀತಿ ವಿಶ್ವಾಸದಿಂದ ಕಂಡು ಗೌರವಿಸಿತು. ಶಾಲಾ ಸಾಹೇಬರಿಗೂ (ಇನ್ಸಪೆಕಟ್ಟರ್) ಲಿಂಗಣ್ಣನವರ ವಿಷಯದಲ್ಲಿ ಗೌರವದ ಹೆದರಿಕೆ. ಅವರಿಗೆ ಎದುರಾಡುವ ಧೈರ್ಯ ಯಾರೂ ಮಾಡದಿರುವುದಕ್ಕೆ ಕಾರಣ ಅವರ ಚಾರಿತ್ರ್ಯ. ಈ ಚಾರಿತ್ರ್ಯದ ಬದುಕಿಗೆ ಶ್ರೀಮಾತಾರವಿಂದರಲ್ಲಿ ಅವರಿಟ್ಟ ಭಕ್ತಿ ಶ್ರದ್ಧೆ. ತಮ್ಮತನವನ್ನೇ ಆ ದೇವಮಾನವರಿಗೆ ಸಮರ್ಪಿಸಿಕೊಂಡಿದ್ದರು. ಮನೆಯಲ್ಲಿ ಮಕ್ಕಳಿಗೆ ಏನಾದರೂ ರೋಗ ರುಜಿನಗಳಾದರೂ ಮಾತಾರವಿಂದರ ಮುಂದೆ ನಿವೇದಿಸುತ್ತಿದ್ದರೇ ಹೊರತು ವೈದ್ಯರ ಕಡೆ ಓಡಿದವರಲ್ಲ. ಆ ಪವಿತ್ರ ಬದುಕಿಗೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡು ಶ್ರೀಗಂಧವಾದವರು. ಅವರು ಬರೆದ ಸಾಹಿತ್ಯ ಭಗವನ್ ವ್ಯಕ್ತಿತ್ವದ ಪೂಜಾ ಮಂತ್ರವಾಯಿತು. ಪದವಿ ಪ್ರಶಸ್ತಿಯ ಆಸೆಗಾಗಿ ಸಿಂಪಿಯವರು ಬರೆಯಲಿಲ್ಲ. ಅವರ ನಿರ್ಮಲ ಸಾಹಿತ್ಯಾರಾಧನೆಗೆ ಸಮಾಜ ಮೆಚ್ಚಿ ಅಹುದಹುದೆನ್ನುವುದಿರಲಿ, ಅವರ ಜೀವನದ ಕೊನೆಯ ಘಟ್ಟದಲ್ಲಿ ಪದವಿ, ಪ್ರಶಸ್ತಿ ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬಂದವು. ಕಾವ್ಯ ಬರೆದವರೆಲ್ಲ ಕವಿಗಳಲ್ಲ, ಸಾಹಿತ್ಯ ರಚಿಸಿದವರು ಸಾಹಿತಿಗಳಲ್ಲ. ಅವರು ಕವಿ ಸಾಹಿತಿಗಳಾಗಿ ಬರೆದಾಗ ಮಾತ್ರ ಆ ಕ್ರಿಯೆಗೆ ಪರಿಪೂರ್ಣತೆ ಬರುತ್ತದೆ. ಕಾವಿ ಹಾಕಿ ಸ್ವಾಮಿ, ನೇಮಕಗೊಂಡು ಪ್ರಾಧ್ಯಾಪಕನೆನ್ನಿಸಿಕೊಳ್ಳಬಹುದು, ಆದರೆ ಅವರಿಗಿರುವ ಅಂತಃಸತ್ವದ ಕೊರತೆಯಿಂದಾಗಿ, ಆ ವ್ಯಕ್ತಿಗೇ ಸಂತೃಪ್ತಿ ಸಂಸ್ಕಾರ ಎರಡೂ ಇಲ್ಲ. ಅಂಥವರಿಂದ ಸಾಮಾಜಿಕ ಸಂಸ್ಕಾರ

ಬಯಸುವದಾದರೂ ಹೇಗೆ? ನಡೆ-ನುಡಿ ಒಂದಾಗಿ ಶರಣನಾಗುವಂತೆ ಬದುಕು-ಬರಹ ಒಂದಾಗಿ ಸಾಹಿತಿಯಾಗಬೇಕಾಗುತ್ತದೆ. ಜನಪದ ಜೀವನಾಡಿಯನ್ನರಿತು, ಆಧ್ಯಾತ್ಮದ ಆರಾಧಕನಾಗಿದ್ದ ಡಾ. ಸಿಂಪಿಲಿಂಗಣ್ಣ ಸಾಹಿತಿಯೂ ಅಹುದು, ಅವರು ಬರೆದದ್ದು ಸಾಹಿತ್ಯವೂ ಸತ್ಯ. ಋಷಿಯಲ್ಲದವ ಕವಿಯಾಗಲಾರ ಎಂಬುದು ಡಾ. ಸಿಂಪಿಲಿಂಗಣ್ಣನವರಿಗೆ ಸಂಪೂರ್ಣ ಅನ್ವಯವಾಗುವ ಮಾತು.

ಅನನ್ಯ ಗೌರವ

ಪದವಿ ಪ್ರಶಸ್ತಿ ಪುರಸ್ಕಾರಗಳಿಂದ ಒಬ್ಬ ಸಾಹಿತಿಯ ಗುಣಮಟ್ಟ ಅಳೆಯುವ ಕಾಲ ಇದಲ್ಲ. ಆದರೆ ಹತ್ತೊಂಬತ್ತು ನೂರಾ ಅರವತ್ತರಿಂದ ತೊಂಬತ್ತಾರರ ದಶಕದಲ್ಲಿ ಡಾ. ಲಿಂಗಣ್ಣನವರಿಗೆ ಸಾಮಾಜಿಕ ಗೌರವ ಪದವಿ ಪ್ರಶಸ್ತಿಗಳ ರೂಪದಲ್ಲಿ ಸಂದುದಕ್ಕೆ ಕನ್ನಡಿಗರೆಲ್ಲ ಸಂತಸಪಟ್ಟು ಅಭಿಮಾನ ವ್ಯಕ್ತಪಡಿಸಿದ್ದಾರೆ. ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕ ಒಂದು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಪಾತ್ರನಾದುದು ಅಸಾಮಾನ್ಯ ಸಾಧನೆಗೊಂಡ ಶಿಖರವೇ ಸರಿ. ಅದರಂತೆ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟ ಅವರ ಕನ್ನಡ ನಾಡು ನುಡಿಗೆ ಸಲ್ಲಿಸಿದ ಅಪ್ರತಿಮ ಅನನ್ಯ ಗೌರವ. ಅದಕ್ಕವರು ಆಶಿಸಿದವರೂ ಅಲ್ಲ, ಅಭಿಮಾನ ಪಟ್ಟು ಬೀಗಿದವರೂ ಅಲ್ಲ.

ಡಾ. ಲಿಂಗಣ್ಣನವರ ಜೀವನದ ಉದ್ದಕ್ಕೂ ಬಡತನ ಅವರ ಬೆನ್ನು ಬಿಡಲೇ ಇಲ್ಲ. ಆದರೆ ಅವರ ಬದುಕಿನ ಕೊನೆಯ ಘಟ್ಟದಲ್ಲಿ ಸಾಮಾಜಿಕ ಸಾಹಿತ್ಯಿಕ ಗೌರವ ಮಾತ್ರ ಅವರನ್ನರಸಿ ಬೆಂಬತ್ತಿ ಬಂದ ಧನ್ಯತೆ ಅವರದಾಗಿತ್ತು.

ಬಹುಮಾನ ಪ್ರಶಸ್ತಿ ಸಭಾಗೌರವ

ಡಾ. ಲಿಂಗಣ್ಣನವರ ಹಲವು ಸಾಹಿತ್ಯ ಕೃತಿಗಳು ರಾಜ್ಯಸರಕಾರಗಳ ಪ್ರತಿಷ್ಠಿತ ಬಹುಮಾನ ಪಡೆದು, ಅಲ್ಪಮಟ್ಟಿನ ಆರ್ಥಿಕ ಸಹಾಯದ ಜೊತೆ

ಅಪಾರ ಗೌರವ ತಂದಿದೆ. 1956 ರಲ್ಲಿ ಅವರ 'ಸ್ವರ್ಗದೋಲೆಗಳು' ಕೃತಿಗೆ ಮುಂಬೈ ಸರಕಾರದಿಂದ ಹತ್ತು ಸಾವಿರ ರೂಪಾಯಿ ಬಹುಮಾನ ಬಂದಿದೆ. ಅನಂತರ 1959 ರಲ್ಲಿ ಮೈಸೂರು ಸರಕಾರ ಅವರ 'ಗರತಿಯ ಬಾಳು' ಕೃತಿಗೆ ಬಹುಮಾನ ನೀಡಿ ಸತ್ಕರಿಸಿತು. ಮರುವರ್ಷವೇ ಅವರ ಇನ್ನೊಂದು ಪುಸ್ತಕ 'ಜನಾಂಗದ ಜೀವಾಳ' ಕ್ಕೆ ಮೈಸೂರು ಸರಕಾರದ ಬಹುಮಾನ ಪ್ರಾಪ್ತವಾಯಿತು. ಅವರ 'ನಾಟ್ಯ ಸಾಧನೆ'ಗೆ 1977ರಲ್ಲಿ ಮತ್ತು 'ನೂರುಗಡಿಗೆ ಒಂದು ಬಡಿಗೆ' ಕೃತಿಗೆ 1980 ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡಮಿಯ ಬಹುಮಾನಗಳು ಲಭ್ಯವಾದವು.

ಅವರಿಗೆ ದೊರೆತ ಗೌರವಾರ್ಹ ಪ್ರಶಸ್ತಿಗಳಿಗೂ ಕೊರತೆ ಇಲ್ಲ. 1960ರಲ್ಲಿ ಅವರ ಶೈಕ್ಷಣಿಕ ಕ್ಷೇತ್ರದ ಗಣನೀಯ ಸೇವೆಯನ್ನು ಲಕ್ಷಿಸಿ ಆದರ್ಶ ಶಿಕ್ಷಕ ರಾಷ್ಟ್ರೀಯ ಪ್ರಶಸ್ತಿ ಲಿಂಗಣ್ಣನವರದಾಯ್ತು. 1968ರಲ್ಲಿ ಸಾಹಿತ್ಯ ಅಕಾಡಮಿಯ ಗೌರವ ಪ್ರಶಸ್ತಿ ದೊರಕಿದ್ದಲ್ಲದೆ 1988ರಲ್ಲಿ ಅವರಿಗೆ 'ಜಾನಪದ ತಜ್ಞ' ಪ್ರಶಸ್ತಿಯೂ ಜಾನಪದ ಯಕ್ಷಗಾನ ಅಕಾಡೆಮಿಯಿಂದ ಪ್ರಾಪ್ತವಾಯಿತು. ಇವೆಲ್ಲಕ್ಕೂ ಮಿಗಿಲಾಗಿ ಗುಲಬರ್ಗಾ ವಿಶ್ವವಿದ್ಯಾಲಯ 1989ರಲ್ಲಿ ಅವರ ಶೈಕ್ಷಣಿಕ ಮತ್ತು ಸಾಹಿತ್ಯಿಕ ಸೇವೆ ಸಾಧನೆಯನ್ನು ಗುರುತಿಸಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸತ್ಕರಿಸಿದ್ದು ಅವರ ಜೀವನದ ಧನ್ಯತೆಗೆ ಸಾಕ್ಷಿಯಾಯಿತು. 1990ರಲ್ಲಿ ಅವರಿಗೆ ಇನ್ನೆರಡು ಗೌರವದ ಗರಿಗಳು ಮೂಡಿದವು. ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮತ್ತು ತೀರ ವಿರಳವಾದ ಮಾನಸ್ಥಾನ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ. ಹೀಗೆ ಅಂದು ಪ್ರಚಲಿತವಾಗಿದ್ದ ಪ್ರತಿಷ್ಠೆಯೆಂದೇ ಹೇಳಬಹುದಾದ, ಕನ್ನಡಿಗರ ಹೆಮ್ಮೆಯ ಬಹುತೇಕ ಪ್ರಶಸ್ತಿಗಳು ಡಾ. ಲಿಂಗಣ್ಣನವರ ಕೊರಳನ್ನಲಂಕರಿಸಿದವು.

ಡಾ. ಸಿಂಪಿ ಲಿಂಗಣ್ಣನವರು ಕನ್ನಡ ಸಾಹಿತ್ಯ ಜಾನಪದ ಮತ್ತು ಕನ್ನಡ ಭಾಷೆಗೆ ಸಂಬಂಧಪಟ್ಟ ಪ್ರಮುಖ ಸಮ್ಮೇಳನಗಳ ಅಧ್ಯಕ್ಷರಾಗುವ ಸದವಕಾಶ ಪಡೆದುದೂ ಅವರ ಸೇವೆಗೆ ಸಂದ ಗೌರವ. 1944ರಲ್ಲಿ

ರಬಕವಿಯಲ್ಲಿ 28ನೆಯ ಅಖಿಲಭಾರತ ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಮ್ಮೇಳನದ ಜಾನಪದ ಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಆರಂಭವಾದುದು 1993ರಲ್ಲಿ ಕೊಪ್ಪಳದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನದಲ್ಲಿ ಪರ್ಯವಸಾನವಾಗುವವರೆಗೆ ಮುಂದುವರೆಯಿತು. 1966ರಲ್ಲಿ ಮೈಸೂರು ವಿಶ್ವವಿದ್ಯಾಲಯ ಏರ್ಪಡಿಸಿದ ಕನ್ನಡ ಲೇಖಕರ ಸಮ್ಮೇಳನದಲ್ಲಿ ಜಾನಪದ ಗೋಷ್ಠಿಯ ಅಧ್ಯಕ್ಷರಾಗಿದ್ದರು. ಮಂಗಳೂರಲ್ಲಿ 1969ರಲ್ಲಿ ನೆರವೇರಿದ ಎರಡನೆಯ ಜಾನಪದ ಸಮ್ಮೇಳನದ ಅಧ್ಯಕ್ಷಸ್ಥಾನ ಚಡಚಣದ ಈ ನಿವೃತ್ತ ಮಾಸ್ತರರದಾಗಿತ್ತು. ಇವರು 1972ರಲ್ಲಿ ಸೊಲ್ಲಾಪುರದಲ್ಲಿ ಅದ್ಧೂರಿಯಾಗಿ ನೆರವೇರಿದ ಗಡಿನಾಡ ಸಮ್ಮೇಳನದ ಅಧ್ಯಕ್ಷ ಸ್ಥಾನದಲ್ಲಿ ರಾರಾಜಿಸಿದರು. 1979ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಹಮ್ಮಿಕೊಂಡ ಆರನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಇಲಕಲ್ಲದಲ್ಲಿ. ಅಧ್ಯಕ್ಷಸ್ಥಾನ ಇವರದಾಗಿತ್ತು. ಜಮಖಂಡಿಯಲ್ಲಿ ಜರುಗಿದ ವಿಜಾಪುರ ಜಿಲ್ಲಾ ಎರಡನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪಟ್ಟ 1980ರಲ್ಲಿ ಲಿಂಗಣ್ಣನವರದಾಗಿದ್ದು ವಿಶೇಷವೇನಲ್ಲ. ಹೊಸಪೇಟೆಯಲ್ಲಿ 1989ರಲ್ಲಿ ಕನ್ನಡ ಶಕ್ತಿ ಕೇಂದ್ರದ ಪ್ರಥಮ ಸಮಾವೇಶದ ಸಭೆಯನ್ನು ಶ್ರೀ ಸಿಂಪಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದ್ದು ವೈಶಿಷ್ಟ್ಯ ಪೂರ್ಣ. ಕನ್ನಡ ಸಾಹಿತಿಯೊಬ್ಬನಿಗೆ ಸಿಗಬೇಕಾದ ಅತ್ಯುಚ್ಚ ಗೌರವದ, ಅಖಿಲ ಭಾರತ-ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನ, 1993ರಲ್ಲಿ ಕೊಪ್ಪಳದಲ್ಲಿ. ಇಡೀ ಕನ್ನಡ ಕುಲಕೋಟಿಯ ಕೊನೆಯ ಗೌರವವಾಗಿಯೇ ಪರಿಣಮಿಸಿತು.

ಹೀಗೆ ಡಾ. ಲಿಂಗಣ್ಣನವರು ಹುಡಿಯಿಂದ ಬೆಳೆದ ಹೂವಾಗಿ ಲಿಂಗಕ್ಕರ್ಪಿತರಾದರು. ಜನಮನದಲ್ಲಿ ಅರಳಿದ ಜನಪದ ಮಲ್ಲಿಗೆಯಾಗಿ ಸದಾ ಘಮಘಮಿಸಿದರು. ಲೌಕಿಕದ ಈ ಅಪಾರಾನುಭವಿ, ಶ್ರೀಮಾತಾರವಿಂದರ ಆಧ್ಯಾತ್ಮದಾಗಸದಲ್ಲಿ ಸದಾ ಮಿನುಗು ನಕ್ಷತ್ರವಾದರು.

* * *

ಸಿಂಪಿ ಲಿಂಗಣ್ಣನವರ ಕೃತಿಗಳು

1. ಗರತಿಯರ ಹಾಡು
2. ಜೀವನ ಸಂಗೀತ
3. ಗರತಿಯರ ಬಾಳು
4. ಜನಾಂಗದ ಜೀವಾಳ
5. ಉತ್ತರ ಕರ್ನಾಟಕದ ಜನಪದ ಕಥೆಗಳು
6. ಉತ್ತರ ಕರ್ನಾಟಕದ ಜನಪದ ಗೀತೆಗಳು
7. ಜನಪದ ಸಾಹಿತ್ಯದಲ್ಲಿ ಕಿರಿದರೊಳೆ ಪರಿದರ್ಥದ ಚಲಕ
8. ಲಾವಣಿಗಳು
9. ಹೆಡಿಗೆ ಜಾತ್ರೆ
10. ಗರತಿಯ ಬಾಳ ಸಂಹಿತೆ
11. ಗಾದೆಗಳ ಗಾರುಡಿ
12. ಜೀವನ ದೃಷ್ಟಿ
13. ಬಾಳಬಟ್ಟೆ
14. ಸನ್ಯಾಸಿ ದಿಬ್ಬ
15. ಬಾಳಬೇಸಾಯ
16. ದಿಟ್ಟಿಸಿ ನೋಡಿದರ
17. ತಲೆಮಾರಿನ ಹಿಂದೆ
18. ಬದುಕಿನ ಬೆಲೆ
19. ನೂರು ಗಡಿಗೆ ಒಂದು ಬಡಿಗೆ
20. ಶ್ರುತಾಶ್ರುತ
21. ಸಾಯ್ ಕೊಲ್
22. ಸ್ವರ್ಗದೋಲೆಗಳು
23. ಭಾರತಕ್ಕೆ ಸ್ವಾತಂತ್ರ್ಯ ದೊರೆತುದೇಕೆ?
24. ಭಾರತದ ಭವ್ಯ ಸಿದ್ಧಾಂತ
25. ಮಕ್ಕಳಿವರೇನಮ್ಮ
26. ಅಸ್ತವ್ಯಸ್ತ
27. ಭಾರತ ಸಂಸ್ಕೃತಿಯ ಸಂಘಟನೆ
28. ನಾಟ್ಯಸಾಧನೆ
29. ಸಾಹಿತ್ಯ ಸಂಪರ್ಕ
30. ಭಾರತೀಯ ಮಹಾಪುರುಷರು
31. ದೇಶಭಕ್ತಿಯ ಕಥೆಗಳು
32. ಬಾಳಿನಲ್ಲಿ ಬೆಳಕು
33. ಕನ್ನಡಿಗರ ಕುಲಗುರು
34. ದತ್ತ ಸಾಹಿತ್ಯ
35. ಶ್ರೀ ಅರವಿಂದರು
36. ಹಳ್ಳಿಯ ಮಹಾತ್ಮ
37. ಪ್ರಿಯದರ್ಶಿ ಅಶೋಕ
38. ಕನ್ನಡ ಕುಲದೀಪ ಬಸವಣ್ಣನವರು
39. ಮಧುರ ಚೆನ್ನರ ಸ್ಮೃತಿಗಳು
40. ಶ್ರೀತಾಯಿದೇವರು.
41. ಮೂವತ್ತೈದು ವರ್ಷ
42. ವಿಶ್ವಕವಿ
43. ಮಧುರಚೆನ್ನರ ಜೀವನ ಮತ್ತು ಕಾರ್ಯ
44. ರಾಮತೀರ್ಥರ ತೀರ್ಥ
45. ಸಿಡಿಲು ಸನ್ಯಾಸಿ

46. ಮಹತ್ಕ್ರಾಂತಿಯ ಮಹಾಮನು
47. ಗಾಂಧಿ ಶತದಲ
48. ಸುಪ್ತಮಾನಸ ಮಹಾಮಾತೆ
49. ಪೌರನೀತಿಯ ಅ ಆ
50. ಪವಿತ್ರ ಜೀವನ
51. ಸುಂದರ ಕತೆಗಳು
52. ದೃಷ್ಟಾಂತ ಕಥೆಗಳು
53. ದೀಪವರ್ತಿ
54. ಜನಜೀವನ
55. ಮರೆಮುಚ್ಚಕ
56. ಚಂಡಾಳ ಚೌಕಡಿ
57. ಭಕ್ತಿ ರಹಸ್ಯ
58. ಸಪ್ತಪದಿ
59. ಮೊದಲನೆ ದೇಶದ್ರೋಹಿ
60. ಪೃಥ್ವಿರಾಜ
61. ಭಗವಾನ್ ಬುದ್ಧದೇವ
62. ಅಮೃತವಾಣಿ
63. ನಮಸ್ಕಾರ
64. ಮುಗಿಲ ಜೇನು
65. ಪೂಜಾ
66. ಮಿಲನ
67. ಬೆಟ್ಟದ ಹೊಳೆ
68. ಮಹಾಪುರುಷರ ಜೀವನ ಪ್ರಸಂಗಗಳು
69. ಗಣದಾಸಿ ವೀರಣ್ಣ
70. ಬಬಲೇಶ್ವರದ ಸ್ವಾಮಿಗಳು
71. ತಿರುವಲ್ಲವರ್
72. ಅಂದಚಂದ
73. ಕವಿ ಮತ್ತು ಕವಿತೆ
74. ಗುಡ್ಡಾಪುರದ ದಾನಮ್ಮ
75. ನಾಮದೇವ
76. ಕಿರುಗನ್ನಡಿ
77. ಭಾರತ ಸಮಸ್ಯೆ
78. ಬಿಚ್ಚು ಮೊಗ್ಗು
79. ರಾಮತೀರ್ಥರ ಪತ್ರಗಳು
80. ಮನೆಯಲ್ಲೇ ಮುಕ್ತಿಯ ದಾರಿ
81. ಸುಖದ ನೆಲೆ
82. ಲೋಬೋ ಲೋಬೋ
83. ವಿಶ್ವಾಮಿತ್ರನ ಸಾಹಸ
84. ಯೋಗದೀಕ್ಷೆ
85. ಧರ್ಮಕ್ಷೇತ್ರೇ ಕುರುಕ್ಷೇತ್ರೇ
86. ಧರ್ಮ ಹಾಗೂ ರಾಷ್ಟ್ರೀಯತ್ವ
87. ಪೂರ್ಣಯೋಗ
88. ಉತ್ತರಪಾಡಾ ಉಪನ್ಯಾಸ
89. ದುರ್ಗಾಸ್ತೋತ್ರ
90. ಪೂರ್ಣಯೋಗದ ಜೀವಾಳ
91. ಸತ್ಯಕಥೆಗಳು
92. ಹೊಸ ಪ್ರವಚನಗಳು
93. ನಾಗಾಲೋಟ
94. ಗೀತೆಯ ಭೂಮಿಕೆ
95. ಲೋಕ ಸೇವೆ
96. ಸಾವಿನ ಸಮಸ್ಯೆ
97. ಸ್ವಾರ್ಥ ತ್ಯಾಗ
98. ಶ್ರೀ ರಾಮಕೃಷ್ಣ ಪರಮಹಂಸರು
99. ಗುರುಲಿಂಗಜಂಗಮ ಮಹಾರಾಜರು
100. ಹಾವಿನ ಹಾಳ ಕಲ್ಲಯ್ಯ
101. ಢಾಳಿಸಿದ ದೀಪ.

ಜಾನಪದ ಗಾರುಡಿಗ ಡಾ. ಸಿಂಪಿ ಲಿಂಗಣ್ಣನವರು ಉತ್ತರ ಕರ್ನಾಟಕದ ಅತ್ಯುತ್ತಮ ಜನಪದ ಗೀತೆಗಳನ್ನು, ಲಾವಣಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ವ್ಯಾಖ್ಯಾನಿಸಿ, ಪ್ರಕಟಿಸಿ, ಪ್ರಚಾರ ಮಾಡಿದವರಲ್ಲಿ ಅಗ್ರಗಣ್ಯರು. ಜೀವನದ ಉದ್ದಕ್ಕೂ ಜಾನಪದವನ್ನೇ ಉಸಿರಾಗಿ ಬದುಕಿದರು. ತಮ್ಮ ಕಾಲದ ಹಿರಿಯರಿಗೆ, ಕಿರಿಯರಿಗೆ, ನಗರದವರಿಗೆ, ಹಳ್ಳಿಗರಿಗೆ ಜಾನಪದದ ಹುಚ್ಚು ಹಿಡಿಸಿದರು. ಜಾನಪದ ಸೊಗಸನ್ನು ವಿವಿಧ ರೀತಿಯಲ್ಲಿ ಪ್ರಚಾರ ಪಡಿಸಿದರು. ಜನಪದ ಲಾವಣಿ ಸಾಹಿತ್ಯದ ಬಗೆಗೆ ಅವರದು ಖಚಿತ ನಿಲವು. ಭಾಷಿಕ ಜಾನಪದವನ್ನು ಸಹಜವಾಗಿ, ಸಮಯೋಜಿತವಾಗಿ, ಸ್ವಾರಸ್ಯವಾಗಿ ಬಳಸುತ್ತಿದ್ದರು. ಕೇವಲ ಶಾಲಾಮಾಸ್ತರಾಗಿ ಜಾನಪದ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಅಮೋಘ; ಪಡೆದ ಜನಮನ್ನಣೆ ಅತ್ಯಮೂಲ್ಯ.

ಸಿಂಪಿ ಲಿಂಗಣ್ಣನವರು ಶ್ರೀ ಅರವಿಂದ ಶ್ರೀಮಾತೆಯರ ಆರಾಧಕರು. ಅವರು ಜಾನಪದ ಗ್ರಂಥಗಳನ್ನಷ್ಟೇ ಅಲ್ಲದೆ ಇತರ ಗ್ರಂಥಗಳನ್ನೂ ಬರೆದು ಹೆಸರಾಗಿದ್ದಾರೆ. ಅಂಥ ವಿಶಿಷ್ಟ ಸಜ್ಜನ ಸಾಹಿತಿಯ ಸಂಕ್ಷಿಪ್ತ ಪರಿಚಯವನ್ನು ಪ್ರಸ್ತುತ ಗ್ರಂಥದಲ್ಲಿ ಕಾಣಬಹುದು.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು